ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಉತ್ತರ ಕರ್ನಾಟಕದ ಪ್ರಸಿದ್ಧ ಗೀಗೀ ಮೇಳಗಳು

ಡಾ. ಅಶೋಕ ನರೋಡೆ



ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿರಸ್ತೆ, ಚಾಮರಾಜಪೇಟೆ
ಬೆಂಗಳೂರು-೫೬೦ ೦೧೮

ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಉತ್ತರ ಕರ್ನಾಟಕದ ಪ್ರಸಿದ್ಧ ಗೀಗೀ ಮೇಳಗಳು

ಡಾ. ಅಶೋಕ ನರೋಡೆ

ಶುಭವಾಗಲಿ
ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು- ೫೬೦೦೧೮

UTTARA KARNATAKADA PRASIDDHA GEEGI MELAGALU
by : Dr. Ashoka Narode
Published by : Kannada Sahitya Parishat
Pampa Mahakavi Road, Chamarajapet, Bangalore - 560018
Pages : 42+v Price : Rs. 20=00 : 2004

ಪ್ರಥಮ ಮುದ್ರಣ	:	೨೦೦೪
ಪ್ರತಿಗಳು	:	೧೦೦೦
ಬೆಲೆ	:	ಇಪ್ಪತ್ತು ರೂಪಾಯಿಗಳು

ಆದಿಚುಂಚನಗಿರಿ ಮಠದ ದತ್ತಿ ಪ್ರಕಟಣೆ

ಅಧ್ಯಕ್ಷರು

ಧರ್ಮದರ್ಶಿ ಹರಿಕೃಷ್ಣ ಪುನರೂರು

ಮುದ್ರಣ : ಬಿ. ಎಂ. ಶ್ರೀ. ಅಚ್ಚುಕೂಟ ಆಫ್‌ಸೆಟ್ ಕನ್ನಡ ಸಾಹಿತ್ಯ ಪರಿಷತ್ತು,
ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು - ೧೮

ಅಧ್ಯಕ್ಷರ ನುಡಿ

ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಭಾಷೆ, ಸಂಸ್ಕೃತಿ, ನಾಡು-ನುಡಿಯ ಸಂರಕ್ಷಣೆ, ಸಂವರ್ಧನೆಗಾಗಿ ಶ್ರಮಿಸುತ್ತಿರುವ ಏಕೈಕ ಸಂಸ್ಥೆ. ಸುಮಾರು ೮೯ ವರ್ಷಗಳ ದೀರ್ಘಕಾಲದ ಇತಿಹಾಸ ಹೊಂದಿರುವ ಪರಿಷತ್ತು ಅನೇಕ ಸಾಹಿತ್ಯ ಕೃತಿಗಳ ಪ್ರಕಟಣಕಾರ್ಯ ಪ್ರಧಾನವಾದುದಾಗಿದೆ. ಈ ಹಿಂದಿನ ಹಲವಾರು ಮಹನೀಯರ ಪ್ರಯತ್ನದ ಫಲವಾಗಿ ಸುಮಾರು ೧೦೦೦ಕ್ಕೂ ಹೆಚ್ಚು ಕೃತಿಗಳನ್ನು ಪರಿಷತ್ತು ಹೊರತಂದಿದೆ. ಈ ಕೃತಿಗಳು ಸಾಹಿತ್ಯ ಕ್ಷೇತ್ರದ ಎಲ್ಲ ಪ್ರಕಾರಗಳಿಗೂ ಸಂಬಂಧಿಸಿವೆ.

ಕನ್ನಡ ಜನತೆಗೆ ಉತ್ತಮ ಸಾಹಿತ್ಯವನ್ನು ನೀಡುವ ಸಲುವಾಗಿ ಅತ್ಯಂತ ಸುಲಭ ಬೆಲೆಯಲ್ಲಿ ಈ ಪುಸ್ತಕಗಳನ್ನು ಒದಗಿಸಲಾಗಿದೆ. ಸಾಹಿತ್ಯಾಭಿಮಾನಿಗಳ ವಾಚನಾಭಿರುಚಿಯನ್ನು ಬೆಳೆಸುವುದರ ಮೂಲಕ ಜ್ಞಾನ ಪ್ರಸಾರ ಮಾಡುವುದು ನಮ್ಮ ಪ್ರಮುಖ ಉದ್ದೇಶಗಳಲ್ಲಿ ಒಂದಾಗಿದೆ. ಈ ದಿಕ್ಕಿನಲ್ಲಿ ಅನೇಕ ದಾನಿಗಳು ಉತ್ತಮ ವೈಚಾರಿಕ ಕೃತಿಗಳ ಪ್ರಕಟಣೆಗಾಗಿ ಪರಿಷತ್ತಿನಲ್ಲಿ ದತ್ತಿಗಳನ್ನು ಸ್ಥಾಪಿಸಿ, ಆ ದತ್ತಿಯ ಮೂಲದಿಂದ ಬರುವ ಬಡ್ಡಿಯ ಹಣದಿಂದ ಪ್ರತಿವರ್ಷವೂ ಒಂದೊಂದು ಅತ್ಯುಪಯುಕ್ತ ಗ್ರಂಥವೊಂದನ್ನು ಪ್ರಕಟಿಸುವುದಕ್ಕೆ ಅನುವು ಮಾಡಿಕೊಟ್ಟಿದ್ದಾರೆ.

'ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ದತ್ತಿ ನಿಧಿ' ನೆರವಿನಿಂದ ಈ ಕೃತಿ ಪ್ರಕಟವಾಗಿದೆ. ದತ್ತಿ ದಾನಿಗಳಾದ ಶ್ರೀಮಠದ ಪೂಜ್ಯ ಸ್ವಾಮಿಜಿಯವರಿಗೆ ಪ್ರಣಾಮಗಳು. ಈ ಗ್ರಂಥವು ಕನ್ನಡ ಸಾಹಿತ್ಯ ಸಂಶೋಧನಾಸಕ್ತರಿಗೂ, ವಿದ್ಯಾರ್ಥಿಗಳಿಗೂ, ಉಪನ್ಯಾಸಕರಿಗೂ ಅತ್ಯಂತ ಉಪಯುಕ್ತವಾಗಿದೆ. ಸಹೃದಯ ಓದುಗರು ಈ ಗ್ರಂಥವನ್ನು ಆದರದಿಂದ ಸ್ವೀಕರಿಸುತ್ತಾರೆಂದು ಆಶಿಸುತ್ತೇನೆ.

ಈ ಕೃತಿಯನ್ನು ಸಿದ್ಧಪಡಿಸಿರುವ ಡಾ. ಅಶೋಕ ನರೋಡೆ ಅವರಿಗೆ ಧನ್ಯವಾದಗಳು. ಅಚ್ಚುಕಟ್ಟಾಗಿ ಮುದ್ರಿಸಿದ ಮುದ್ರಣಾಲಯಕ್ಕೂ ಪ್ರೀತಿ ಪೂರ್ವಕ ವಂದನೆಗಳು.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು

ಪರಿವಿಡಿ

ಉತ್ತರ ಕರ್ನಾಟಕದ ಪ್ರಸಿದ್ಧ ಗೀಗೀ ಮೇಳಗಳು

ಉತ್ತರ ಕರ್ನಾಟಕ ಜಾನಪದಸಾಹಿತ್ಯದ ಸಮೃದ್ಧ ಗಣಿಯಾಗಿದೆ. ಸುಪ್ರಸಿದ್ಧ ಗೀತ ಪ್ರಕಾರಗಳಲ್ಲಿ ಗೀ ಗೀ ಪದಗಳಿಗೆ ಅಗ್ರತಾಂಬೂಲವಿದೆ. ಲಾವಣಿಯು ತನ್ನ ವಿಶೇಷತೆಯಿಂದ ಹಾಗೂ ದೇಶೀಯ ಸೊಗಡಿನಿಂದ ಹಳ್ಳಿಗರ ಎದೆಯ ಕದ ತಟ್ಟಿದೆ. "ಲಾವಣಿ ಸಾಹಿತ್ಯವು ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಪ್ರಚಾರವಿರುವ ಜಾನಪದ ಸಾಹಿತ್ಯದ ಒಂದು ಪ್ರಭೇದ. ಇದರಲ್ಲಿ ಒಂಟಿ ಲಾವಣಿ, ಮೇಳ ಲಾವಣಿ, ಎಂದು ಎರಡು ಪ್ರಕಾರಗಳು"[1] ಪ್ರಮುಖವಾಗಿವೆ.

'ಲಾವಣಿ' ಪದಕ್ಕೆ 'ಲಾವಣ್ಯ'ವೆಂಬ ಅರ್ಥವಿದೆ. ಲಾವಣ್ಯವೆಂದರೆ ಶೃಂಗಾರ. 'ಲಾವಳಿ'ಯಿಂದ ಲಾವಣಿ ಬಂದಿದೆಯೆಂಬುದು ವಿದ್ವಾಂಸರ ಅಭಿಮತ. "ಲಾವಣಿಯೆಂದರೆ, ಹಳ್ಳಿ ಹಾಡು, ರುಚಿ, ಸೌಂದರ್ಯ, ಉಪ್ಪು ಮುಂತಾದ ಬೇರೆ ಬೇರೆ ಅರ್ಥದ ಪದರುಗಳು ಇವೆ. ಲಾವಣಿಯೆಂದರೆ ಶೃಂಗಾರಭರಿತವಾದ ಹಾಡುಗಳು, ರುಚಿ, ಸೌಂದರ್ಯ ಒಳಗೊಂಡ ಹಾಡುಗಳು"[2] ಎಂಬ ವಿವರ ದೊರೆಯುತ್ತದೆ.

ಲಾವಣಿಹಾಡು ನಮ್ಮ ಹಳ್ಳಿಗಾಡಿನ ಜನರ ಮನೋರಂಜನೆಯ ಪ್ರಮುಖ ಸಾಧನ. ಜನ ಸಾಮಾನ್ಯರ ಸುಖಸಂಕಥಾ ವಿನೋದದ ಒಂದು ಅವಶ್ಯಕ ಅಂಗ"[3] ವೆಂಬ ಅಭಿಪ್ರಾಯವೂ ಇದೆ. "ಲಾವಣಿ ಹಳ್ಳಿಯ ಬದುಕಿಗೆ ಹಿಡಿದ ಗಟ್ಟಿ ಸಾಹಿತ್ಯ. ಆಧ್ಯಾತ್ಮವನ್ನು ಅಭಿವ್ಯಕ್ತ ಮಾಡುವ ಈ ಸಾಹಿತ್ಯ ಪ್ರಚಾರ ಮನರಂಜನೆಗೂ ಮಾಧ್ಯಮವೆನಿಸಿದೆ. ಮಕ್ಕಳಿಂದ ಮುದುಕರವರೆಗೆ, ಹಳ್ಳಿಗರಿಂದ ಪಟ್ಟಣಿಗರವರೆಗೆ ಎಲ್ಲರ ಚಿತ್ರವನ್ನು ಸೆರೆಹಿಡಿಯುವ ಮೋಡಿ ಇದರಲ್ಲಿದೆ. ಅನುಭಾವದ ಆಳ, ಶಾಸ್ತ್ರದ ವಿಸ್ತಾರ, ವೀರದ ಗರ್ಜನೆ, ಶೃಂಗಾರದ ಮಂದಹಾಸ, ನಕ್ಕು ನಗಿಸುವ ಹಾಸ್ಯ, ಎಲ್ಲಕ್ಕೂ ಇದು ಮಾಧ್ಯಮ"[4] ಎಂಬ ಮಾತು ಹೆಚ್ಚು ಸಮಂಜಸವಾಗಿದೆ. ಲಾವಣಿಗೆ ಅರ್ಥಪೂರ್ಣವಾದ ಭಾಷೆ ಇದರಲ್ಲಿದೆ.

ಮೂಲ :

ಲಾವಣಿ (ಗೀ ಗೀ ಪದದ) ಮೂಲವನ್ನು ಮರಾಠಿಯ 'ಪೊವಾಡ' ದ ಹಿನ್ನೆಲೆಯಲ್ಲಿ ಗ್ರಹಿಸುವ ಮತ್ತು ಗುರುತಿಸುವ ಪ್ರಯತ್ನ ನಡೆದಿತ್ತು. ಆದರೆ ಲಾವಣಿ ಅಚ್ಚಗನ್ನಡದ ದೇಶೀ ಛಂದಸ್ಸು. ಕನ್ನಡ ನೆಲದಲ್ಲಿ ಅರಳಿದ ಗೀತ ಪ್ರಕಾರ ; ಕನ್ನಡದಿಂದಲೇ ಮರಾಠಿಗೆ ಹೋಗಿರುವುದು ಸಾಬೀತಾಗಿದೆ. ಕನ್ನಡದ ಹಿರಿಮೆ-ಗರಿಮೆಯನ್ನು ಹೆಚ್ಚಿಸುವಲ್ಲಿ ಲಾವಣಿ ಸಾಹಿತ್ಯದ ಕೊಡುಗೆ ಅಮೂಲ್ಯ. ಕನ್ನಡ ಜನಪದರು ಅಭಿಮಾನ ಪಡುವ ಛಂದೋರೂಪವಾಗಿದೆ.

*** ಡಾ. ನಿಂಗಣ್ಣ ಸಣ್ಣಕ್ಕಿ :**

"ಕವಿರಾಜ ಮಾರ್ಗಕಾರ ಹೆಸರಿಸುವ ಚತ್ತಾಣ ಬೆದಂಡೆಗಳಿಗೆ ಮೂಲದಲ್ಲಿ ಲಾವಣಿಯಂತಹ ಪ್ರಕಾರಗಳಿದ್ದಿರಬಹುದಾದರೆ, ಅದು ಪ್ರಾಚೀನ ಕಾಲದ ಕರ್ನಾಟಕದಲ್ಲಿ ರೂಢಿಯಲ್ಲಿತ್ತೆಂದು ೧೫ ಅಥವಾ ೧೬ನೆಯ ಶತಮಾನದ ನಂತರ ಸೃಷ್ಟಿಯಾದ ಲಾವಣಿಗಳು ಮಾತ್ರ ಸುಸಂಬದ್ಧವಾಗಿವೆಯೆಂದು ಹೇಳಬಹುದು"[೪].

*** ಡಾ. ಸಂಗಮೇಶ ಬಿರಾದಾರ :**

೧) "ಲಾವಣಿ ಸಾಹಿತ್ಯವು ಕುಮಾರವ್ಯಾಸನಿಗಿಂತ ಹಿಂದೆಯೇ ಇರಬೇಕೆಂಬುದು ವಿದಿತವಾಗುತ್ತದೆ. ನೂರಾರು ವರುಷಗಳ ಅಂತರದಲ್ಲಿ ಈ ಶಬ್ದ ಬಳಕೆಯಾಗಿರುವುದರಿಂದ ಇದರ ನಿರಂತರತೆಯು ಮುಂದುವರೆದಿತ್ತೆಂದು ತಿಳಿಯುತ್ತದೆ"[೫].

೨) ".................... ೭ನೆಯ ಶತಮಾನದಷ್ಟು ಹಿಂದಿನಿಂದಲೇ ಈ ಲಾವಣಿಯು ಕನ್ನಡ ಜಾನಪದ ಸಾಹಿತ್ಯದಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿರುವಲ್ಲಿ ಅಚ್ಚರಿ ಪಡಬೇಕಾಗಿಲ್ಲ"[೬].

*** ಡಾ. ವೀರೇಶ ಬಡಿಗೇರ :**

"ಮಹಾರಾಷ್ಟ್ರ ಎನಿಸಿಕೊಳ್ಳುವ ಭೌಗೋಳಿಕ ಪರಿಸರವು ಚಾಲುಕ್ಯ ಪುಲಕೇಶಿ ಕಾಲಕ್ಕೆ ಕರ್ನಾಟಕದ ಭಾಗವೇ ಆಗಿತ್ತು. ಕ್ರಮೇಣ ಉತ್ತರ ಹಿಂದೂಸ್ತಾನದಿಂದ ಪರಕೀಯ ದಾಳಿಗಳು ಸಂಭವಿಸುತ್ತಿರುವಂತೆಯೇ ಮರಾಠಿಗರು ಈ ಪ್ರದೇಶದಲ್ಲಿ ಬಂದು ನೆಲೆಸಿದರು. ಸುಮಾರು ೧೦ನೆಯ ಶತಮಾನದಿಂದ ಇದರ (ಲಾವಣಿ)ಯ ಉಗಮವನ್ನು ಗುರುತಿಸಬಹುದು. ೧೦ನೆಯ ಶತಮಾನದಿಂದ ೧೯ನೆಯ ಶತಮಾನದವರೆಗೆ ಈ ಭಾಗದ ದೊರೆಗಳು, ಕನ್ನಡಿಗರು, ಮಹಮ್ಮದೀಯರೂ ಆಗಿರುವುದರಿಂದ ಬಹುಶಃ 'ಗೀ ಗೀ' ಕನ್ನಡದಿಂದಲೇ ಮರಾಠಿಗೆ ಹೋಗಿರುವ ಸಾಧ್ಯತೆಗಳು ಸಂಭವನೀಯವೆನಿಸುತ್ತವೆ"[೭].

ಈ ಮೂವರು ವಿದ್ವಾಂಸರು ಪ್ರತಿಪಾದಿಸುವ ವಿಷಯ ಆಧಾರವನ್ನೊಳಗೊಂಡಿದ್ದು, ನಂಬಿಕೆಗೆ ಅರ್ಹವಾಗಿದೆಯಾದ್ದರಿಂದ ಲಾವಣಿಯು ಕನ್ನಡದ ನೆಲದಿಂದಲೇ ಮೂಡಿಬಂದ 'ಜನಪದ ಗೀತ ಮಂದಾರ' ವೆಂದು ಹೇಳಬಹುದು.

ಲಾವಣಿ – ಗೀ ಗೀ :

ಲಾವಣಿ ಪದಗಳಿಗೂ ಗೀ ಗೀ ಪದಗಳಿಗೂ ಯಾವ ವ್ಯತ್ಯಾಸವೂ ಇಲ್ಲ. ಇವೆರಡರ ರಚನಾ ಶಿಲ್ಪವೊಂದೇ ರೀತಿಯಾಗಿದೆ. ಗೋಷ್ಠಿ ವಿಧಾನದಲ್ಲಿ ಮಾತ್ರ ತುಸು ವಿಭಿನ್ನವಾಗಿದೆ. ಒಬ್ಬನೇ ಹಾಡಿದಾಗ ಲಾವಣಿಯೆಂದು, ಗುಂಪುಗೂಡಿ ಹಾಡಿದಾಗ ಮೇಳ ಲಾವಣಿಯೆಂದು ಕರೆಸಿಕೊಳ್ಳುತ್ತದೆ. "ಮೇಳಲಾವಣಿ ಗೀಗೀ ಮೇಳವೆನಿಸುತ್ತದೆ. ಇದರಲ್ಲಿ ಸಾಮಾನ್ಯವಾಗಿ ಮೂರು ಜನರಿರುತ್ತಾರೆ. ಮುಂದೆ ಹಾಡುವ (ಮುಮ್ಮೇಳದ)ವನು ಕೈಯಲ್ಲಿ ಡಪ್ಪು ಹಿಡಿದಿದ್ದರೆ, ಹಿಂದೆ ಹಾಡುವವರಿಬ್ಬರು (ಹಿಮ್ಮೇಳ)ದವರು ಕೈಯಲ್ಲಿ ತುಂತುಣಿ ಹಾಗೂ ತಾಳ ಹಿಡಿದಿರುತ್ತಾರೆ. ಮುಂದಿನವನು ಹಾಡುತ್ತಿರುವಂತೆ ಹಿಂದಿನವರು 'ಗೀಯಗಾ – ಗೀಯಗಾ' ಎಂದು ಸ್ವರವೆಳೆಯುತ್ತಾರೆ. ಈ ಕಾರಣದಿಂದಲೇ ಈ ಮೇಳಕ್ಕೆ ಗೀಗೀ ಮೇಳವೆಂದು ಹೆಸರು ಬಂದಿದೆ"[೯] ಎಂಬ ವ್ಯಾಖ್ಯಾನ ಸಮಂಜಸವಾಗಿದೆ.

ಹರದೇಶಿ – ನಾಗೇಶಿ :

ಗೀಗೀ ಮೇಳಗಳಲ್ಲಿ ಮುಖ್ಯವಾಗಿ ಎರಡು ಪಂಗಡ. ಸ್ತ್ರೀ(ಶಕ್ತಿ)ಯು ಸರ್ವಶ್ರೇಷ್ಠವೆಂದು ಪ್ರತಿಪಾದಿಸುವ ಪಂಗಡ 'ನಾಗೇಶಿ'ಯೆನಿಸುತ್ತದೆ. ಪುರುಷನೇ ಸರ್ವಶ್ರೇಷ್ಠ, ಪುರುಷನಿಂದಾಗಿಯೇ ಸ್ತ್ರೀಯರಿಗೆ ಅಸ್ತಿತ್ವವಿದೆಯೆಂದು ಪ್ರತಿಪಾದಿಸುವ ತಂಡಕ್ಕೆ 'ಹರದೇಶಿ'ಯೆಂದು ಕರೆಯಲಾಗುತ್ತದೆ. ಇವೆರಡೂ ಪಂಗಡಗಳ ನಡುವೆ ತಮ್ಮ ತಮ್ಮ ವಾದಕ್ಕೆ ಪೂರಕ ಸಾಮಗ್ರಿಯನ್ನು ನೀಡಿ ತಮ್ಮ ವಾದವೇ ಶ್ರೇಷ್ಠವೆಂದು ಸ್ಥಾಪಿಸುತ್ತಾರೆ. ಆಯಾ ಮೇಳದ ಗುಂಪುಗಳು ಬಲಿಷ್ಠವಾಗಿ ರೂಪುಗೊಳ್ಳುತ್ತವೆ. ಇಂಥ ಊರು ಹರದೇಶಿಯವರದು, ಇಂಥ ಊರು ನಾಗೇಶಿಯವರದು ಎನ್ನುವಷ್ಟರ ಮಟ್ಟಿಗೆ ತಮ್ಮ

ಅಸ್ತಿತ್ವವನ್ನು ಪಡೆದುಕೊಳ್ಳುತ್ತವೆ. ಪೈಪೋಟಿ ತುಂಬ ತುರುಸಿನದಾಗಿರುತ್ತದೆ. ಪ್ರೇಕ್ಷಕರಿಗೆ ರಸದೌತಣ ಉಣ ಬಡಿಸುತ್ತವೆ.

ಉದಾ : "ತೇರದಾಳ ಊರಾ ಗಂಡ ಮೆಟ್ಟಾ
ನಾಗೇಶವರದಾ ನಡ್ಯೊದಿಲ್ಲಾ ಆಟಾ
ನಾಗೇಶವರ ಬರತಾರ ಒಳೆತಾಟಾ
ಬಿರಿಹತ್ತಾಣ ಹೋಗತಾರ ಹೊಂಟಾ"[೧೦]

ಎನ್ನುವಲ್ಲಿ ತೇರದಾಳ 'ಹರದೇಶಿ'ಯವರ ಗಂಡುಮೆಟ್ಟಿನ ಸ್ಥಳವೆಂಬುದು ವಿದಿತವಾಗುತ್ತದೆ. ಅದೇ ರೀತಿ –

"ಕಾಕತಿ ಊರ್ರಾ ಮೋಜಿನ ಶಾರಾ ಸಿದ್ಧೇಶನ ಜ್ಞಾನಕೊಟ್ಟ
ಕವಿಮಾಡಿ ಹಾಡೂದ ದರ ಯಾವ್ವೈತ್ರೂ
ನಾಗೇಶಿ ಮ್ಯಾಳ ನಾವು ಕೂಡಿ ನಿತ್ಯೇವು ನಿಮ್ಮ ಜ್ಞಾನ ಮಾಡಿ
ನಿಮ್ಮ ಕಡಿ ಬೇಡ್ತೀವ ಜ್ಞಾನದ ಗಣಿ"[೧೧]

ಎನ್ನುವಲ್ಲಿ 'ಕಾಕತಿ'ಯೂರು 'ನಾಗೇಶಿ'ಯವರ ತಾಣವೆಂಬುದು ಸ್ಪಷ್ಟವಾಗುತ್ತದೆ. "ನಾಗಿ ನಿನ್ನ ತವರಮನಿ ಜಮಖಂಡಿ, ತೇರದಾಳ ತುಕಾರಾಮನ ಇಟಗೊಂಡಿ"[೧೨] ಎಂಬ ಹಾಡು ತೇರದಾಳ ಹರದೇಶಿಗೂ; ಜಮಖಂಡಿ ನಾಗೇಶಿಯವರಿಗೂ ಹೆಸರುವಾಸಿಯಾದ ಸ್ಥಳವೆಂಬುದು ಸ್ಪಷ್ಟವಾಗುತ್ತದೆ.

ಹರದೇಶಿ ಮತ್ತು ನಾಗೇಶಿ ಎರಡೂ ಒಂದೇ ಊರಲ್ಲಿ ಇರುವುದು ಅಪರೂಪ. ಎರಡೂ ಮೇಳ ಒಂದೇ ಊರಿನಲ್ಲಿರುವುದಕ್ಕೆ 'ಅಥಣಿ' ಉತ್ತಮ ಉದಾಹರಣೆಯಾಗುತ್ತದೆ.

ಒಂದು :

"ಹರಿಹರದಾಸರ ದಪ್ಪ ನುಡಿಯತಾವ
ಅಥಣಿಪುರ ತಾಲೂಕದೊಳಗ
ಯಂಕ ಅಣ್ಣಾರಾಮ ಮಾಧು-ಘುಲರಾಮ
ರುದ್ರ–ಮುದ್ರರ ಸುದ್ಧ ಅಂದ್ರೊ ಕವಿ"[೧೩]

ಮತ್ತೊಂದು :

"ಅಥಣಿ ಮುಂದ ಕಟ್ಟಿತೊ ಪರಸಿ
ದಡಾ ತುಂಬಿ ಹರುವತಾಳ ಕಾಸಿ
ಸಿದ್ರಾಮಭೈರಿ ಮುತ್ತಿನ ರಾಶಿ
ವಿದ್ಯೆಕೊಡಾಂವ ನನ್ನ ಮೇಲೆ ಆಶಿ
ಕ್ಯಾಮ ಸತ್ತೆಣ್ಣ ಅಕ್ಷರ ಸೋಸಿ
ನೀ ಕೇಳಾಕೋ ಹರದಾಶಿ

ಕ್ಯಾಮ ಸತ್ತೆಣ್ಣ, ಅಪ್ಪಣ್ಣ ಮೂರು ಮಂದಿ ಹರದಾಸಿದ ಎಬಸ್ಯಾರ ಗೋಳಾ"[೧೪] ಒಂದರಲ್ಲಿ ಹರದೇಶಿ ಮತ್ತೊಂದರಲ್ಲಿ ನಾಗೇಶಿಯವರನ್ನು ವಿಶೇಷವಾಗಿ ಕೊಂಡಾಡಲಾಗಿದೆ.

ವಸ್ತು :

ಗೀಗೀ ಪದಗಳಿಗೆ ವಸ್ತು ವೀರ-ಶೃಂಗಾರ-ಹಾಸ್ಯ ಪ್ರಧಾನವಾಗಿದ್ದರೂ ಇಂಥದೇ ಇರಬೇಕೆಂಬ ಯಾವ ಕಡ್ಡಾಯವೂ ಇಲ್ಲ. ಪೌರಾಣಿಕ, ಐತಿಹಾಸಿಕ, ಆಧ್ಯಾತ್ಮಿಕ, ಅನುಭಾವಿಕ, ಸಾಮಾಜಿಕ, ಧಾರ್ಮಿಕ ಯಾವುದಾದರೂ ಆಗಬಹುದು. ಸ್ವಾತಂತ್ರ್ಯ, ಆಂದೋಲನ, ಖಾದಿ ಚಳುವಳಿ, ಸ್ವದೇಶಿ ಮಂತ್ರ, ಕುಟುಂಬಕಲ್ಯಾಣ,ಹಸಿರು ಕ್ರಾಂತಿ, ಸಣ್ಣ ಉಳಿತಾಯ, ಸಾಕ್ಷರತೆ ಮೊದಲಾಗಿ ಹತ್ತು ಹಲವು ಸಂಗತಿಗಳು, ಸಮಕಾಲೀನ ಆಗು ಹೋಗುಗಳು ಈ ಗೀಗೀ ಪದಗಳ ವಸ್ತು ವಿಷಯಗಳಾಗುತ್ತವೆ.

ವಿಂಗಡನೆ :

ಉತ್ತರ ಕರ್ನಾಟಕದ ಸಮಸ್ತ ಲಾವಣಿ ಸಂಪ್ರದಾಯವನ್ನು, ಅಂದರೆ ಇಡೀ ಗೀಗೀ ಮೇಳದ ಪರಂಪರೆಯನ್ನು ಒಟ್ಟು ಐದು ರೀತಿಯಾಗಿ ವಿಂಗಡಿಸಬಹುದು, ಅಭ್ಯಾಸದ ಅನುಕೂಲ, ವಿಷಯ ಸ್ಪಷ್ಟತೆಗಾಗಿ ಮಾಡಿದ ವಿಂಗಡನೆಯಿದು.

೧. ತೇರದಾಳ ಗೀಗೀ ಸಂಪ್ರದಾಯ

೨. ಬೀ. ಬೀ. ಇಂಗಳಗಿ ಗೀಗೀ ಸಂಪ್ರದಾಯ

೩. ಹಲಸಂಗಿ ಗೀಗೀ ಸಂಪ್ರದಾಯ

೪. ಸಾವಳಗಿ-ದೇಸಾಯಿ ಗೀಗೀ ಸಂಪ್ರದಾಯ

೫. ಹುಲಕುಂದ ಗೀಗೀ ಸಂಪ್ರದಾಯ

ಇನ್ನು ಮುಂದೆ ಇವುಗಳನ್ನು ಒಂದೊಂದಾಗಿ ಅಧ್ಯಯನಿಸಬಹುದು.

ಅಡಿ ಟಿಪ್ಪಣಿಗಳು :

೧. ಡಾ. ಸಂಗಮೇಶ ಬಿರಾದಾರ, ತೇರದಾಳದ ಲಾವಣಿಕಾರರು, ಪುಟ : ೦೯.

೨. ಡಾ. ಬಿ.ಬಿ. ಬಿರಾದಾರ, ಶೃಂಗಾರ ಲಾವಣಿಗಳು, ಪುಟ : ೦೯.

೩. ಶಿವಶರಣರ ಜಾವಳಿ, ಜಾನಪದ ಸಾಹಿತ್ಯದರ್ಶನ. ಪುಟ : ೧೮೯.

೪. ಡಾ. ಶ್ರೀರಾಮ ಇಟ್ಟಣ್ಣವರ, ಲಾವಣಿ, ಪುಟ : ೨೩.

೫. ಜಾನಪದ ವೈಭವ-ಕನ್ನಡ ಲಾವಣಿಗಳು, ಪುಟ : ೭೬, ೭೭.

೬. ತೇರದಾಳದ ಲಾವಣಿಕಾರರು, ಪುಟ : ೬, ೭.

೭. ತೇರದಾಳದ ಲಾವಣಿಕಾರರು, ಪುಟ : ೭.

೮. ಉತ್ತರ ಕರ್ನಾಟಕದ ಜಾನಪದ ಗೀತ ಮೇಳಗಳು, ಪುಟ : ೩೨೬, ೩೨೭.

೯. ಜಾನಪದ ಕೈಪಿಡಿ, ಪುಟ : ೪೪೮.

೧೦. ಲಾವಣಿ, ಪುಟ : ೧೦.

೧೧. ಲಾವಣಿ, ಪುಟ : ೧೫.

೧೨. ತೇರದಾಳ ಲಾವಣಿಕಾರರು, ಪುಟ : ೫೨.

೧೩. ಲಾವಣಿ, ಪುಟ : ೧೫.

೧೪. ಲಾವಣಿ, ಪುಟ : ೧೫.

----- ✂ -----

೧. ತೇರದಾಳ ಸಂಪ್ರದಾಯದ ಗೀಗೀ ಮೇಳಗಳು

'ತೇರದಾಳ'ವು ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲ್ಲೂಕಿನಲ್ಲಿರುವ ಒಂದು ದೊಡ್ಡ ಊರು. ಪಟ್ಟಣ ಪಂಚಾಯತಿಯನ್ನೊಳಗೊಂಡ ನಗರ. ಕೃಷ್ಣಾ ಮತ್ತು ಘಟಪ್ರಭಾ ನದಿಗಳು ಹರಿಯುವ ನಡುವಿನ ನಾಡಿದು. ಜಮಖಂಡಿ ಸಾಂಗ್ಲಿ 'ರಾಜ್ಯ ಹೆದ್ದಾರಿ'ಯ ಮೇಲಿದೆ. ಕರ್ನಾಟಕ ಮತ್ತು ಮಹಾರಾಷ್ಟ್ರಗಳಿಗೆ ಸಂಪರ್ಕಸೇತುವೆಯಾಗಿ ತೇರದಾಳ ಗ್ರಾಮವಿದೆ. ರಾಷ್ಟ್ರಕೂಟರ ಕಾಲದಲ್ಲಿ ಅಸ್ತಿತ್ವದಲ್ಲಿದ್ದ ಸುಮಾರು ಹನ್ನೆರಡು ನೂರು ವರುಷಗಳಷ್ಟು ಪ್ರಾಚೀನ ಇತಿಹಾಸ ಹೊಂದಿದ ಗ್ರಾಮ. ಇಲ್ಲಿಯ (ತೇರದಾಳ) ಗುಡ್ಡಗಳ ಗುಹೆಗಳಲ್ಲಿ ಪ್ರಾಗೈತಿಹಾಸಿಕ ಕುರುಹುಗಳು ಹೇರಳವಾಗಿ ದೊರೆತಿವೆ.

ತೇರದಾಳ ಭಾಗದ ಗೀಗೀ ಮೇಳಗಳ ಪರಂಪರೆಯ ಬಗ್ಗೆ ನಿಶ್ಚಿತ ಆಧಾರಗಳಿಲ್ಲ. ನಮ್ಮ ಜಾನಪದ ಸಾಹಿತ್ಯದ ಯಾವುದೇ ರೂಪಗಳಿಗೂ ಈ ಮಾತು ಅನ್ವಯವಾಗುತ್ತದೆ. ಡಾ. ಸಂಗಮೇಶ ಬಿರಾದಾರ ಅವರು ಕೈಗೊಂಡ ಕ್ಷೇತ್ರಕಾರ್ಯ ಮತ್ತು ಸಂಶೋಧನೆಯ ಫಲವಾಗಿ ಹೊಸ ಸಂಗತಿಗಳು ಬೆಳಕಿಗೆ ಬಂದಿವೆ. ಉತ್ತರ ಕರ್ನಾಟಕದ ಗೀಗೀ ಮೇಳಗಳಿಗೆ ತೇರದಾಳ ಗುರುಸ್ಥಾನದಲ್ಲಿದೆಯೆಂಬ ಅಂಶವಿದೀಗ ಸುಸ್ಪಷ್ಟವಾಗಿದೆ. ಈ ಪರಂಪರೆಯ ಮೂಲಪುರುಷನೆಂದರೆ – ಜ್ಯೋತೆಪ್ಪ.

೧:೧. ಜ್ಯೋತೆಪ್ಪ :

ತೇರದಾಳದ 'ಖಿಲ್ಲಟ್ಟಿ'ಯವನೀತ. ಜ್ಯೋತೆಪ್ಪ ನೀಲವಾಣಿಯೆಂಬ ಲಿಂಗಾಯತ ವ್ಯಾಪಾರಿ ಮನೆತನದವನು[೧].

"ಜ್ಯೋತೆಪ್ಪನೇ ತೇರದಾಳ ಲಾವಣಿ ಸಾಹಿತ್ಯಕ್ಕೆ ಬೀಜರೂಪ"ನಾದವನೆಂದು ಹೇಳಬಹುದು. ಈತನ ಕಾಲ ಕ್ರಿ.ಶ. ೧೭೫೮. ಬಬಲಾದಿ ಚಿಕ್ಕಯ್ಯ ಹಾಗೂ ಜ್ಯೋತೆಪ್ಪನವರು ಸಮಕಾಲೀನರು. ಇಬ್ಬರು ಪರಸ್ಪರ ಗೌರವ ಹೊಂದಿದವರು. ಇಬ್ಬರಲ್ಲಿ ವಾದ–ಸಂವಾದ ನಡೆದ ಬಗ್ಗೆ, ಇವರಿಬ್ಬರ ಸುತ್ತ ಹರಡಿದ ಪವಾಡ–ದಂತಕತೆಗಳ ಕುರಿತಾಗಿ ಹತ್ತು–ಹಲವು ಸಂಗತಿಗಳು ಜನಮಾನಸದಲ್ಲಿವೆ.

ಬಬಲಾದಿ ಚಿಕ್ಕಯ್ಯನವರು ಜ್ಯೋತೆಪ್ಪನ ಹಾಡುಗಾರಿಕೆ ಕುಶಾಗ್ರಮತಿಗೆ ಮೆಚ್ಚಿ 'ಸೈ ಸೌದಾಗರ'ಎಂದು ಬಿರುದನ್ನಿತ್ತು ಪ್ರೋತ್ಸಾಹಿಸಿದ್ದರು. ಜನತೆ ಜ್ಯೋತೆಪ್ಪನನ್ನು 'ಸೈ ಸೌದಾಗರ' ಎಂದೇ ಅಭಿಮಾನದಿಂದ ಕರೆಯುತ್ತಿದ್ದರು. ಗೀಗೀ ಮೇಳದವರಿಗೂ ಸೌದಾಗರ ಎಂಬ ಹೆಸರೇ ಹೆಚ್ಚು ಇಷ್ಟವಾದಂತೆ ತೋರುತ್ತದೆ.

ಜ್ಯೋತೆಪ್ಪನ ಗೀಗೀ ಮೇಳದ ಯಶಸ್ಸು ನಾಡಿನಾದ್ಯಂತ ಹರಡಿತ್ತು. ಬಬಲಾದಿ ಶಕ್ತಿ ಪೀಠದಿಂದ ಈ ಜ್ಯೋತೆಪ್ಪನಿಗೆ 'ಮೇಕ ಮುಂಗುಲಿ'[೨]ಯನ್ನು ನೀಡಿ, ಆದರದಿಂದ ಗೌರವಿಸಿ, ಸನ್ಮಾನಿಸಿರುವ ಸಂಗತಿಯು ಇತಿಹಾಸದಲ್ಲಿ ದಾಖಲಾಗಿದೆ.

"ತೇರದಾಳದ ಗೀಗೀ ಮೇಳದವರು "ಕಾಟಾಹಚ್ಚಿ" ಹಾಡುವಲ್ಲಿ ನಿಪುಣರು" ಎಂಬ ಖ್ಯಾತಿಗೂ ಪಾತ್ರರಾಗಿದ್ದಾರೆ. ಈ ಯಶಸ್ಸಿನ ರೂವಾರಿಗಳೆಂದರೆ ಜ್ಯೋತೆಪ್ಪ ಮತ್ತು ತುಕಾರಾಮರ ಅಪೂರ್ವ ಜೋಡಿಯೆಂದು ಹೇಳಬಹುದು.

೧:೨. ತುಕಾರಾಮ :

ಜ್ಯೋತೆಪ್ಪ ತೇರದಾಳ ಸಂಪ್ರದಾಯದ ಗೀಗೀ ಮೇಳಕ್ಕೆ ಚಾಲನೆ ನೀಡಿದರೆ; ಅದಕ್ಕೆ ಹೆಸರು, ಕೀರ್ತಿ, ಪ್ರಸಿದ್ಧಿ, ಜನಪ್ರಿಯತೆಯನ್ನು ತಂದುಕೊಟ್ಟವನೆಂದರೆ ಚತುರ ತುಕಾರಾಮ. "ಲಾವಣಿಕಾರ ತುಕಾರಾಮ ಎಂದಾಗ ತೇರದಾಳ, ತೇರದಾಳ ಎಂದಾಗ, ತುಕಾರಾಮ ನೆನಪಾಗುವುದು ಸಹಜವಾಗಿದೆ. ತುಕಾರಾಮನು ಸೌದಾಗರನ ಶಿಷ್ಯ, ಮೋಪಗಾರ ಮನೆತನಕ್ಕೆ ಸೇರಿದ ವ್ಯಕ್ತಿ. ಈತನ ಕಾಲ ಸುಮಾರು ೧೭೭೦-೧೭೮೦ ಎನ್ನಲಾಗಿದೆ.

ತೇರದಾಳ ಗೀಗೀ ಸಂಪ್ರದಾಯದವ ತನ್ನ ಉತ್ತುಂಗ ಶಿಖರ ತಲುಪಿದ್ದು ತುಕಾರಾಮನ ಕಾಲದಲ್ಲಿ. ಈತ ಹರದೇಶಿ ಸಂಪ್ರದಾಯದ ಹಾಡುಗಾರ. ಈತನ ಮುಂದೆ ನಾಗೇಶಿಯವರು ತಲೆಯೆತ್ತಿ ನಿಲ್ಲಲು ಸಾಧ್ಯವಾಗುತ್ತಿರಲಿಲ್ಲವಂತೆ. ಆದ್ದರಿಂದಲೇ

"ನಾಗಿನಿನ್ನ ತೌರಮನಿ ಜಮಖಂಡಿ
ತೇರದಾಳ ತುಕಾರಾಮನ ಇಟಗೊಂಡಿ"[೩]

ಎಂಬ ಪಲ್ಲವಿ ಜನರ ನಾಲಿಗೆಯ ಮೇಲೆ ನಲಿದಾಡುತ್ತದೆ. ಇದು ತುಕಾರಾಮನ ಹಾಡುಗಾರಿಕೆಯ ಶ್ರೇಷ್ಠತೆಗೆ ನಿದರ್ಶನವಾಗಿದೆ.

ತುಳಜಾರಾಮ, ತುಕಾರಾಮನನ್ನು 'ಚತುರ ತುಕಾರಾಮ'ನೆಂದು ಕರೆದು ಹುರಿದುಂಬಿಸಿದ್ದಾನೆ. ತುಕಾರಾಮ ಕೇವಲ ಹಾಡುಗಾರ ಮಾತ್ರವಾಗಿರದೆ, ಸಂಘಟನಾ ಚತುರನೂ, ಒಳ್ಳೆಯ ಕವಿಯೂ ಆಗಿದ್ದನು. ಆತನ ಮೇಳ ತುಂಬ ಪ್ರಸಿದ್ಧವಾಗಿತ್ತು[೪].

ತುಕಾರಾಮ ಹಾಡದ ವಸ್ತು ವಿಷಯಗಳೇ ಇಲ್ಲ. ತಾತ್ವಿಕ, ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ, ಪೌರಾಣಿಕ, ಸಮಕಾಲೀನ, ಜಾನಪದೀಯ, ಗ್ರಾಮೀಣ ಸ್ತರ ಹೀಗೆ ಹಲವಾರು ಗೀಗೀ ಪದ ರಚಿಸಿದ್ದಾನೆ. ಸಾಂದರ್ಭಿಕವಾಗಿ ಹೌದು-ಹೌದೆನ್ನುವಂತೆ ಹಾಡಿದ್ದಾನೆ. ತುಕಾರಾಮ ಹಾಗೂ ಆತನ ಗೀಗೀ ಮೇಳದ ಕುರಿತಾಗಿ ಹತ್ತಾರು ದಂತಕತೆಗಳಿಂದು ಜನ-ಜನಿತವಾಗಿವೆ. ತೇರದಾಳ ಗೀಗೀ ಮೇಳದ ಪರಂಪರೆಯಲ್ಲಿ ತುಕಾರಾಮನಿಗೆ ಅಗ್ರತಾಂಬೂಲ ಸಲ್ಲುತ್ತದೆ.

"ತುಕಾರಾಮ ಕವಿ ಚತೂರಾ
ಅವರಿಗೆ ಆರು ಮಂದಿ ಶಿಷ್ಯಾರಾ
ಗೋಪಾಳಾ ದುರದುಂಡಿ ಹೌದ-ಹೌದ ನಾಡ ಮ್ಯಾಲ
ಕವಿ ಮಾಡುವಲ್ಲಿ ಜಾಹೀರಾ ॥ [೫]"

ಎಂದು ಗೋಪಾಳ ದುರದುಂಡಿ ದಾಖಲಿಸಿದ್ದಾನೆ. ಯಂಕ-ಅಣ್ಣಾರಾಮ, ಮಾಧು-ಘುಲಾರಾಮ, ಗೋಪಾಳ-ದುರದುಂಡಿ ಆರು ಜನ ಶಿಷ್ಯರು, ನ್ಯಾಮಣ್ಣನೂ ತುಕಾರಾಮನ ಶಿಷ್ಯನಾಗಿದ್ದ. ಆದರೆ ಆ ಆರುಮಂದಿಯ ಗುಂಪಿನಲ್ಲಿ ಆತನಿಲ್ಲ. ತನ್ನದೇ ಆದ ಒಂದು ಗೀಗೀ ಮೇಳ ಕಟ್ಟಿರುವದು ಇಲ್ಲಿ ಹೆಸರಿಸದಿರುವದಕ್ಕೆ ಕಾರಣವಾಗಿರಬಹುದು. ತುಕಾರಾಮನ ವಸ್ತಾದ ತುಳಜಾರಾಮ. ತುಕಾರಾಮನನ್ನು ರೂಪಿಸುವಲ್ಲಿ ಆತನ ಕೊಡುಗೆ ಅಮೂಲ್ಯವಾಗಿದೆ.

೧ : ೩. ತುಳಜಾರಾಮ :

ತೇರದಾಳ ಪರಂಪರೆಯ ಗೀಗೀ ಮೇಳದಲ್ಲಿ ತುಳಜಾರಾಮನಿಗೆ ಅಗ್ರಸ್ಥಾನವಿದೆ. ತುಕಾರಾಮನ ವಸ್ತಾದನೀತ. ತುಕಾರಾಮನನ್ನು ಚತುರ ತುಕಾರಾಮನೆಂದು ಹರಸಿ, ಹಾರೈಸಿದ ಗುಣಗ್ರಾಹಿಯೀತ. ತುಕಾರಾಮನ ಗೀಗೀ ಮೇಳ ಎಲ್ಲೆಡೆ ವಿಜಯದುಂದುಭಿ ಮೊಳಗಿಸಲು ಈತನ ಪ್ರೇರಣೆ ಸಕಾಲಿಕ ಮಾರ್ಗದರ್ಶನವೇ ಕಾರಣವಾಗಿದೆ.

ತುಳಜಾರಾಮನ ಕುರಿತಾಗಿ ತಲಸ್ಪರ್ಶಿಯಾದ ಅಧ್ಯಯನವಾಗಬೇಕಾಗಿದೆ. ಈತನ ರಚನೆಗಳಿದ್ದು, ಸಂಗ್ರಹಿಸುವ, ಸಂಕಲನಿಸುವ, ಸಂಪಾದಿಸುವ ಹಾಗೂ ಪ್ರಕಟಿಸುವ ಕಾರ್ಯ ನಡೆಯಬೇಕಾಗಿದೆ.

೧ : ೪. ಗೋಪಾಳ – ದುರದುಂಡಿ :

ಚತುರ ತುಕಾರಾಮನ ಶಿಷ್ಯ ಪರಂಪರೆಯಲ್ಲಿ ಮೂಡಿಬಂದಿರುವ ಅಧ್ಭುತ ಜೋಡಿಯಿದು. ಗುರುವಿಗೆ ಖ್ಯಾತಿಯನ್ನು ತಂದಿತ್ತವರು. ಗುರುವಿನ ಹರದೇಶಿ ಸಂಪ್ರದಾಯವನ್ನು ಸಮರ್ಥವಾಗಿ ಮುಂದುವರೆಸಿ, ಸಮರ್ಪಕವಾಗಿ ಬೆಳೆಸಿದ ಕೀರ್ತಿ ಈ ಜೋಡಿಗೆ ಸಲ್ಲುತ್ತದೆ. ತುಕಾರಾಮನು ಹಾಕಿದ ಮಾರ್ಗವನ್ನು ಮತ್ತಷ್ಟು ವಿಸ್ತರಿಸಿದ್ದಾರೆ.

೧ : ೫. ಮಾಧು – ಘುಲಾರಾಮ :

ತುಕಾರಾಮ ಶಿಷ್ಯ ಪಡೆಯಲ್ಲಿ ಎರಡನೆಯ ಜನಪ್ರಿಯ ಜೋಡಿಯಿದು. ತಮ್ಮ ಮೇಳದ ಮೂಲಕ, ಹಾಡಿನ ವಿಶೆಷತೆ, ವಿಷಯ ಪ್ರತಿಪಾದನೆ, ಜನ ಸಮುದಾಯಕ್ಕೆ ಮಾಡುವ ಮೋಡಿಯಿಂದಾಗಿ ಅಪರೂಪವೆನಿಸಿದ ಜೋಡಿಯಿದು.

೧ : ೬. ಯಂಕ – ಅಣ್ಣಾರಾಮ :

ತುಕಾರಾಮನ ಶಿಷ್ಯರಲ್ಲಿ ಮೂರನೆಯ ಯಶಸ್ವೀ ತಂಡವಿದು. ಮೊದಲಿನೆರಡು ಜೋಡಿಯಷ್ಟೇ ಪ್ರತಿಭಾ ಸಂಪನ್ನರಿವರು. ಗುರುವಿನ ಕೀರ್ತಿ ಕಳಶಕ್ಕೆ ಕಳಶಪ್ರಾಯವಾಗಿ ಗೀಗೀ ಮೇಳ ಮುನ್ನಡೆಸಿ, ಜನಮಾನಸದಲ್ಲಿ ತಮ್ಮ ಛಾಪನ್ನೊತ್ತಿದವರು.

ಈ ಮೂರು ಜನಪ್ರಿಯ ಜೋಡಿಗಳು ತಮ್ಮ ತಮ್ಮ ಗೀಗೀ ಮೇಳಗಳಿಂದ ನಾಡಿನ ತುಂಬ ಪ್ರದರ್ಶನ ನೀಡಿ, ಹರದೇಶಿ ಸಂಪ್ರದಾಯದ ವಿಜಯಯಾತ್ರೆಯ ಯಶೋದುಂದುಭಿ ಮೊಳಗಿಸಿದ್ದಾರೆ. ತೇರದಾಳದ ಗೀಗೀ ಮೇಳದ ಪರಂಪರೆಯಲ್ಲಿ ಈ ಮೂರು ಜೋಡಿಯವರು ಚಿರಸ್ಥಾಯಿ ಹೆಸರುಗಳಿಸಿದ್ದಾರೆ.

ಸಣ್ಣಯಂಕಣ್ಣ, ಬಾಲ ಅಣ್ಣಾರಾಮ, ಬಾಲ ತುಕಾರಾಮ, ಇವರು ಮೋಪಗಾರ ಮನೆತನದ ಅಂದರೆ, ಚತುರ ತುಕಾರಾಮನ ವಂಶಜರಲ್ಲಿ ಆಗಿಹೋದ ಲಾವಣಿಕಾರರು.

೧ : ೭. ಅಣ್ಣಾರಾಮ :

ಅಣ್ಣಾರಾಮ, ತನ್ನ ಮುಂದಿನ ತಲೆಮಾರಿನ ಗೀಗೀ ಹಾಡುಗಾರರಿಗೆ 'ವಸ್ತಾದ'ನಾಗಿ

ನಿಂತು, ಸಮರ್ಥನಾಗಿ ಮುನ್ನಡೆಸಿದಾತ. ತನ್ನದೇ ಆದ ಶಿಷ್ಯ ಬಳಗವನ್ನು ಹುಟ್ಟು ಹಾಕುವುದರ ಮೂಲಕ ಹೊಸ ಇತಿಹಾಸ ಸೃಷ್ಟಿಸಿದಾತ.

ಚನ್ನ, ಪ್ರಭು, ಬಸಲಿಂಗ – ಶಿವನಿಂಗ, ಮಲ್ಲ – ಸೋಮಣ್ಣ, ಪ್ರಧಾನಿ, ಸರ್ಜಾ, ಸಾತಲಿಂಗ ಮೊದಲಾದ ಶಿಷ್ಯ – ಪ್ರಶಿಷ್ಯರ ಪಡೆಯನ್ನು ನಿರ್ಮಿಸಿದಾತ. ಶ್ರೇಷ್ಠ ಸಂಘಟಕನಾಗಿ ಸಮರ್ಥ 'ವಸ್ತಾದ'ನಾಗಿ ಅಣ್ಣಾರಾಮ ಗಮನ ಸೆಳೆಯುತ್ತಾನೆ.

ನ್ಯಾಮಣ್ಣ ಮಗೆಣ್ಣ, ಮಲ್ಲಣ್ಣ, ಮಹಮ್ಮದ್ ಇವರು ತೇರದಾಳದಿಂದಲೇ ಉದಿಸಿ ಬಂದು ಗೀಗೀ ಮೇಳದಲ್ಲಿ ಪ್ರವೇಶ ಪಡೆದವರು. ಇವರ ಕುರಿತು ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

೧ : ೮. ಅಥಣಿ :

ಅಥಣಿಯು ತೇರದಾಳ ಸಂಪ್ರದಾಯಕ್ಕೆ ಸೇರಿದ ಸ್ಥಳ. ರಾಜಕೀಯವಾಗಿ ಬೆಳಗಾಂವಿ ಜಿಲ್ಲೆಗೆ ಸೇರಿದ ನಗರವಾದರೂ ; ಭೌಗೋಳಿಕವಾಗಿ, ಚಾರಿತ್ರಿಕವಾಗಿ ತೇರದಾಳ ಪರಿಸರಕ್ಕೆ ಸಮೀಪವಿರುವ ನಗರ. ಲಾವಣಿ ಹಾಡು, ಗೀಗೀ ಮೇಳಗಳ ಹಿನ್ನೆಲೆಯಲ್ಲಿ ಅಪ್ಪಟ ತೇರದಾಳ ಪರಂಪರೆಗೆ ಸೇರಿದೆ.

ಅಥಣಿಯು "ನಾಗೇಶಿ"ಯವರ ಪ್ರಮುಖ ಸ್ಥಳವಾಗಿತ್ತು. ಮುತ್ಯಾ ಮೋದಿನಶಾ, ಮಕಬುಲಶಾ, ಇಮಾಮಶಾ, ಸಿದ್ಧರಾಮ ಭೈರಿ, ಮುಂತಾದವರು ನಾಗೇಶಿಯ ವಸ್ತಾದರಾಗಿ ಹೋಗಿದ್ದಾರೆ. ಸ್ತ್ರೀ ಶ್ರೇಷ್ಠತೆಯನ್ನು ಎತ್ತಿ ಹೇಳುವ ಪಂಥವಿದು. ಅಥಣಿ ನಾಗೇಶಿಯವರ ಮೆಟ್ಟಾಗಿದ್ದರೂ ; ಅದೇ ಕಾಲಕ್ಕೆ 'ಹರದೇಶಿ' ಸಂಪ್ರದಾಯವು ಅದರಷ್ಟೇ ಪ್ರಭಾವಶಾಲಿಯಾಗಿ ಬೆಳೆದಿತ್ತೆಂಬುದನ್ನು ಮರೆಯುವಂತಿಲ್ಲ.

೧ : ೯. ಮುರಲೀಧರ ಸಿದ್ಧರಾಮ ಜಾಧವ :

ಈತ ಬಾಲ ತುಕಾರಾಮನ ಬಾಲ್ಯದ ಗೆಳೆಯ. ಅನೇಕ ಪ್ರಸಿದ್ಧ ಲಾವಣಿಗಳನ್ನು ರಚಿಸಿದಾತ. ಅವನಲ್ಲಿ ಹಾಡಿನ ಹಗೆ (ಭಂಡಾರ) ಇತ್ತಂತೆ ! ಗೀಗೀ ಪದ ಕಟ್ಟುವಲ್ಲಿ ಆತನ ಸೋಪಜ್ಞತೆ ಗರಿಗೆದರುತ್ತಿತ್ತಂತೆ. ಉಳಿದವರಿಗಿಂತ ಭಿನ್ನವಾಗಿ ತುಂಬ ಪರಿಣಾಮಕಾರಿಯಾಗಿ ಆತನ ರಚನೆಗಳಿರುತ್ತಿದ್ದುವಂತೆ. ಆದರೆ ಅಪಾರವಾಗಿದ್ದ ಆತನ ಲಾವಣಿ ಸಾಹಿತ್ಯವನ್ನು ವ್ಯವಸ್ಥಿತವಾಗಿ ಸಂಗ್ರಹಿಸದೇ ಹೋದುದು ಜಾನಪದ ಸಾಹಿತ್ಯಕ್ಕೆ ತುಂಬಲು ಸಾಧ್ಯವಾಗದ ಹಾನಿಯಾಗಿದೆ.

೧ : ೧೦. ತೇರದಾಳ ಭಾಗದ ಗೀಗೀ ಮೇಳಗಳು :

ಸುಮಾರು ಮೂರು ಮೂರೂವರೆ ನೂರು ವರ್ಷದ ಇತಿಹಾಸ ಹೊಂದಿರುವ ತೇರದಾಳ ಗೀಗೀ ಮೇಳಗಳ ಸಂಖ್ಯೆ ಅಗಣಿತ ಪ್ರಮಾಣದಲ್ಲಿದೆ. ಇತಿಹಾಸದಲ್ಲಿ ಕಾಲವಾಗಿ ಹೋದ ಮೇಳಗಳೂ ಅಸಂಖ್ಯವಾಗಿವೆ. ಸದ್ಯ ಲಭ್ಯವಿದ್ದ ಮಾಹಿತಿಗಳಿಗೆ ಅನುಸಾರವಾಗಿ ಉಲ್ಲೇಖಿಸುವ ಪ್ರಮುಖ ಗೀಗೀ ಮೇಳಗಳಿವು. ಮರನೂರ ಸಿದ್ಧನಗೌಡ, ಕುಡಚಿ ರಾಯಪ್ಪ ಮಧುರಖಂಡಿ ಎಲ್ಲಪ್ಪ, ಮಧುರಖಂಡಿ ಚನ್ನಪ್ಪ, ಬಿಜ್ಜರಗಿ ಕಾಡಪ್ಪ, ಜನವಾಡ ನಾನಾಸಾಹೇಬ, ಬನಹಟ್ಟಿಯ ಖುದಾಮಾಸ್ತರ, ತುಂಗಳ ಸತ್ಯಪ್ಪ, ರಬಕವಿ – ಬನಹಟ್ಟಿಯ ಅಪ್ಪಣ್ಣಪ್ಪ ಜಂಬಗಿ, ಬಿಕ್ಕಟ್ಟಿಯ ರಾಣವ್ವ, ಸಾವಳಗಿ ಶಿವನಗೌಡ, ಮಹಾಲಿಂಗಪುರ ಶಿರಾಜಸಾಬ, ಮಹಾಲಿಂಗಪುರ ರಾಣ್ಯಾ – ಕುಬ್ಯಾ, ಉಳ್ಳಾಗಡ್ಡಿ ಪರಪ್ಪ, ಬನಹಟ್ಟಿಯ ಸಿದ್ಧಮಾಳಪ್ಪ ಜಿಡ್ಡಿಮನಿ, ಹಂದಿಗುಂದ ಲಕ್ಕಪ್ಪ ಮಾದರ, ರಾಮಪ್ಪ ಬಸಲಿಂಗಪ್ಪ ತುಪ್ಪದ, ತೇರದೂರ ಬಾಳು, ಪರಮಾನಟ್ಟಿ ಮುಲ್ಲಾ ಮುಂತಾದವರು ಕಟ್ಟಿದ ಗೀಗೀ ಮೇಳಗಳು ತೇರದಾಳದ ಗೀಗೀ ಮೇಳದ ಪರಂಪರೆಯನ್ನು ಸಾರ್ಥಕವಾಗಿ ಮುನ್ನಡೆಸಿವೆ.

೧ : ೧೧. ಪ್ರಮುಖ ಸ್ಥಳಗಳು :

ತೇರದಾಳ, ಅಥಣಿ, ಬಾಳಿಗೇರಿ, ಕನಮಡಿ, ಕಕಮರಿ, ಯಂಕಚ್ಚಿ, ಬಡಚಿ ಅಬ್ಯಾಳ, ಮುರಗುಂಡಿ, ಹಣಮಾಪುರ, ಕೆಸರಾಳ, ಚಿಕ್ಕಟ್ಟಿ, ಹುಲ್ಯಾಳ, ದರೂರ, ಕವಟಕೊಪ್ಪ, ಜಮಖಂಡಿ, ಗಲಗಲಿ, ಬೀಳಗಿ, ಮಧುರಖಂಡಿ, ಹನಗಂಡಿ, ಹೊಸೂರ, ಹಂದಿಗುಂದ, ಕೆಸರಗೊಪ್ಪ, ತಮದಡ್ಡಿ, ಮುಗಳಖೋಡ, ಸತ್ತಿ, ಸವದಿ, ಹುಲಿಯಾಳ, ಇಂಗಳಗಾಂವ, ಮದಭಾವಿ, ಚಿಮ್ಮಡ, ಬೆಳಗಲಿ, ಢವಳೇಶ್ವರ, ಇನ್ನೂ ನೂರಾರು ಊರುಗಳಲ್ಲಿ ತೇರದಾಳ ಸಂಪ್ರದಾಯದ ಗೀಗೀ ಮೇಳಗಳಿವೆ.

೧ : ೧೨. ಸಮಾರೋಪ :

ತೇರದಾಳ ಸಂಪ್ರದಾಯದ ಗೀಗೀ ಮೇಳಗಳಲ್ಲಿ ಎಲ್ಲ ಬಗೆಯ ಎಲ್ಲ ಮತದ ಎಲ್ಲ ಮನೋಧರ್ಮದ, ಎಲ್ಲ ವೃತ್ತಿಯ ಜನರು ಸರಿಬೆರೆತು ಕಲಾರಾಧನೆ ಮಾಡಿದ್ದಾರೆ. ಜಾತಿ – ಮತ, ಕಾಲ – ಪಂಥ, ಪಕ್ಷ – ಪಂಗಡಗಳನ್ನು, ದಾಟಿ ಗೀಗೀ ಮೇಳಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಕೆಳಸ್ತರದ, ದಲಿತ ಜನಾಂಗದ, ದುಡಿಯುವ ವರ್ಗದ ಕೊಡುಗೆ ಅಪಾರವಾಗಿದೆ. ಮುಸ್ಲೀಮರ ಕಾಣಿಕೆಯು ಗಮನಾರ್ಹವಾಗಿದೆ.

ಸದ್ದು-ಗದ್ದಲವಿಲ್ಲದೆ ಸೌಹಾರ್ದತೆ ಸೇತುವೆಯನ್ನು ನಿರ್ಮಿಸುವ, ಭಾವೈಕ್ಯತೆಯನ್ನು ಬೆಸೆಯುವ ಕಾರ್ಯವನ್ನು ಗೀಗೀ ಮೇಳಗಳು ಮಾಡಿರುವುದು ಅಭಿಮಾನದ ಸಂಗತಿಯಾಗಿದೆ. ತೇರದಾಳ ಸಂಪ್ರದಾಯದ ಲಾವಣಿ ಸಾಹಿತ್ಯ ಮತ್ತು ಗೀಗೀ ಮೇಳಗಳ ಕುರಿತಾಗಿ ವಿಸ್ತೃತವಾಗಿ ಅಧ್ಯಯನ ಕೈಗೊಳ್ಳಬೇಕಿದೆ. ಒಂದು ಪಿ.ಎಚ್.ಡಿ. ಮಾಡುವಷ್ಟು ವಿಪುಲ ಸಾಮಗ್ರಿಯಿದೆ.

ಅಡಿ ಟಿಪ್ಪಣಿಗಳು :

೧. ಡಾ. ಸೋಮಶೇಖರ ಇಮ್ರಾಪೂರರು – "ಜ್ಯೋತೆಪ್ಪ (ಸೌದಾಗಾರ) ಅವರು ಮುಸಲ್ಮಾನನೆಂದಿರುವುದು" ಸತ್ಯಕ್ಕೆ ದೂರವಾದ ಸಂಗತಿಯಾಗಿದೆ. ನೋಡಿ : ಜಾನಪದ ಸಾಹಿತ್ಯದರ್ಶನ. (ಸಂಪುಟ : ೫) ಪುಟ : ೨೦೩.

೨. ಮೇಕಮುಂಗಲಿ ಎಂದರೆ – ಲಾವಣಿ ಸಾಹಿತ್ಯದಲ್ಲಿ ಗೀಗೀ ಸಂಪ್ರದಾಯಕ್ಕೆ ಸಲ್ಲುವ ಅತ್ಯುನ್ನತ ಗೌರವವಾಗಿದೆ : ೫೨.

೩. ತೇರದಾಳ ಭಾಗದ ಲಾವಣಿಕಾರರು, ಪುಟ : ೫೨.

೪. ವಿವರಗಳಿಗಾಗಿ ನೋಡಿ : ತೇರದಾಳ ಭಾಗದ ಲಾವಣಿಕಾರರು, ಪುಟ : ೧೫

೫. ತೇರದಾಳ ಭಾಗದ ಲಾವಣಿಕಾರರು – ಚತುರ ತುಕಾರಾಮ, ಪುಟ : ೪೭.

----- ✕ -----

೨. ಬೀ ಬೀ ಇಂಗಳಗಿ ಗೀಗೀ ಮೇಳಗಳು

ಪ್ರವೇಶ :

'ಬೀ ಬೀ ಇಂಗಳಗಿ'ಯು ಬಿಜಾಪುರ ಜಿಲ್ಲೆಯ ಸಂದಗಿ ತಾಲ್ಲೂಕಿನ ಒಂದು ಸಣ್ಣ ಹಳ್ಳಿ. ಉತ್ತರ ಕರ್ನಾಟಕದ ಗೀಗೀ ಮೇಳಗಳಲ್ಲಿ ಎತ್ತರದ ಸಾಲಿನಲ್ಲಿರುವ 'ಹಸನ್ ಸಾಹೇಬ'ನ ಕಾರ್ಯಕ್ಷೇತ್ರ. ಗೀಗೀ ಮೇಳದ ಹಾಡುಗಾರಿಕೆಯ ಬೆಳವಣಿಗೆಯ ಇತಿಹಾಸದಲ್ಲಿ 'ಬೀ ಬೀ ಇಂಗಳಗಿ' ಸಂಪ್ರದಾಯಕ್ಕೆ ಪ್ರಮುಖ ಸ್ಥಾನವಿದೆ.

ಭೌಗೋಳಿಕವಾಗಿ ಬಿಜಾಪುರಜಿಲ್ಲೆಯ ಉತ್ತರ ಮತ್ತು ಈಶಾನ್ಯ ಭಾಗ, ಕಲಬುರ್ಗಿ ಜಿಲ್ಲೆಯ ಪಶ್ಚಿಮಭಾಗಕ್ಕೆ ಸೇರಿದ ಭಾಗವು ಬೀ ಬೀ ಇಂಗಳಗಿ ಗೀಗೀ ಮೇಳದ ಪರಂಪರೆಯೆನಿಸುತ್ತದೆ. ಈ ಮೇಳದವರ ಹಾಡುಗಳು ಬೀದರ, ಕಲಬುರ್ಗಿ, ಬಿಜಾಪುರ, ಬಾಗಲಕೋಟ, ಬೆಳಗಾಂವಿ ಜಿಲ್ಲೆಗಳಲ್ಲಿಯೂ ಕೂಡ ಪ್ರಚಾರದಲ್ಲಿರುವುದನ್ನು ಕಾಣಬಹುದು. ಈ ಭೌಗೋಳಿಕ ಪರಿಸರದಲ್ಲಿ ಗೀಗೀ ಮೇಳಗಳು ತುಂಬ ಸಮೃದ್ಧವಾಗಿಯೂ, ಸಾಹಿತ್ಯದಿಂದ ಸತ್ವಯುತವಾಗಿಯೂ ಬೆಳೆದು ಬಂದಿವೆ. ಗೀಗೀ ಪದಕಾರರು ಹೇರಳವಾಗಿ ಮೂಡಿ ಬಂದಿದ್ದಾರೆ. ಕೆಲವರು ಗುರು–ಶಿಷ್ಯ–ಪ್ರಶಿಷ್ಯರ ಸಂಬಂಧ ಹೊಂದಿದ್ದಾರೆ. ಮತ್ತೇ ಹಲವರು 'ಹರದೇಶಿ–ನಾಗೇಶಿ'ಗಳ ಮೇಳಗಳಲ್ಲಿದ್ದು 'ಎದುರು–ಬದುರಾಗಿ' ವಾದ–ಸಂವಾದ ಬೆಳೆಸಿದ್ದಾರೆ. ಸ್ನೇಹ–ವಿಶ್ವಾಸ–ಸೌಹಾರ್ದತೆಯ ಸೇತುವೆಯಾಗಿದ್ದಾರೆ. ಈ ಪರಂಪರೆಗೆ ಹಸನ್ ಸಾಹೇಬನ ಕೊಡುಗೆ ಅತ್ಯಮೂಲ್ಯವಾಗಿದೆ.

೨ : ೧. ಹಸನ್ ಸಾಹೇಬ (ಕ್ರಿ.ಶ. ೧೮೫೮–೧೯೧೮) :

ಬೀ ಬೀ ಇಂಗಳಗಿ ಗೀಗೀ ಸಂಪ್ರದಾಯಕ್ಕೆ ಶ್ರೀಕಾರ ಹಾಕಿದ, ಹೊಸ ಇತಿಹಾಸ ಹುಟ್ಟುಹಾಕಿದ ವ್ಯಕ್ತಿಯೀತ. ಗೀಗೀ ಮೇಳಗಳಲ್ಲಿ ಬೀ ಬೀ ಇಂಗಳಗಿಯ ಹೆಸರನ್ನು ಇತಿಹಾಸದ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ದಾಖಲಿಸಿದ ಕೀರ್ತಿ ಹಸನ್ ಸಾಹೇಬನಿಗೆ ಸಲ್ಲುತ್ತದೆ. "ದೈವದತ್ತವಾದ ಪ್ರತಿಭೆ, ಕಂಠದ ಮಾಧುರ್ಯ, ಸಾಹಸ ಪ್ರವೃತ್ತಿ, ಬಹುಮುಖ ಸಾಧನೆ; ಹಸನ್ ಸಾಹೇಬನು ಹಾಡುಗಾರನಾಗಿ, ಗೀಗೀ ಹಾಡುಗಳ ರಚನಾಕಾರನಾಗಿ, ಗೀಗೀ ಮೇಳಗಳ ಸಂಘಟಕನಾಗಿ ಮಾಡಿದ ಕಾರ್ಯ ಅಪಾರವಾಗಿದೆ. ಗೀಗೀ ಪದದ ಗತಿಯನ್ನು ಗುರುತಿಸಿ ಅದಕ್ಕೊಂದು ಸ್ವತಂತ್ರ ರೂಪ ಕೊಡುವ ಮಹತ್ಕಾರ್ಯ ವನ್ನು ಮಾಡಿದ"[೧] ನೆಂಬುದು ಪ್ರಮುಖ ಸಂಗತಿಯಾಗಿದೆ.

ಹಸನ್ ಸಾಹೇಬನ ಗೀಗೀ ಮೇಳ ಅತೀ ಜನಪ್ರಿಯ ಮೇಳವಾಗಿತ್ತು. ಜಾತ್ರೆ, ಉತ್ಸವ, ಉರುಸು, ಹಬ್ಬ–ಹರಿದಿನ, ಓಕುಳಿ, ಅಲಾಬ್‌ಗಳಲ್ಲಿ ಹಸನ್‌ಸಾಹೇಬನ ಹಾಡುಗಳನ್ನು ಹಾಡಿಸಲು ಸಂಘಟಕರು ಉತ್ಸುಕರಾಗುತ್ತಿದ್ದರು. ಜನ ಗೀಗೀ ಪದ ಕೇಳಲು ಜಾತ್ರೆಯಂತೆ

ಕೂಡುತ್ತಿದ್ದರು. ಹಸನ್‌ಸಾಹೇಬ ಹೋದ-ಹೋದಲೆಲ್ಲ ಗೆಲುವಿನ ಅಲೆಯಲ್ಲಿ ತೇಲಿ ಬರುತ್ತಿದ್ದ. ಆತನ ಮೇಳಕ್ಕೆ ಸೋಲೆಂಬುದೇ ಇರಲಿಲ್ಲ. ಆದ್ದರಿಂದಲೇ

"ಭರದಿ ಕಾಳಿ ಹಿಡಿಸಿಬಿಟ್ಟ ನಾಲ್ಕುದಿಕ್ಕಿಗಿ ವಾಯೇನಾ
ಇಂಗಳಗಿ ಹಸನಾ
ಸೂರ್ಯಹೊಂಟ ಸೂರ್ಯ ಮುಳಗಲಿ
ಅವನ ವಾಯೇನಾ ಗೀಗೀ"

ಎಂಬ ಗೀಗೀ ಪದಗಳು ರಚನೆಯಾಗಿರುವುದು ಹಸನ್-ಸಾಹೇಬನ ವ್ಯಕ್ತಿತ್ವ ಹಿರಿಮೆಯನ್ನು ಸಾರಿ-ಸಾರಿ ಹೇಳುತ್ತವೆ.

ಹಸನ್ ಜನಪ್ರಿಯ ಹಾಡುಗಾರನಷ್ಟೇ ಅಲ್ಲ, ಪ್ರತಿಭಾನ್ವಿತ ಕವಿಯೂ ಆಗಿದ್ದ. "ಹಸನ್‌ರ ಹಾಡಾ ಸಾವಿರದಾ ಮ್ಯಾಲಾ" ಎನ್ನುವಲ್ಲಿಯ ಶ್ಲೇಷೆಯನ್ನು ಗುರುತಿಸಬಹುದು. ಆದರೆ ಹಸನ್ ರಚಿಸಿದ ಗೀಗೀ ಪದಗಳೆಲ್ಲವು ಇಂದು ಇಡಿಯಾಗಿ ಲಭಿಸದಿರುವುದು ವಿಷಾದನೀಯ ಅಂಶವಾಗಿದೆ. ಒಬ್ಬರಿಂದೊಬ್ಬರಿಗೆ ಹಂಚಿಹೋದ ಹಾಡುಗಳೆಲ್ಲ ವಿಜಾಪುರ, ಗುಲಬರ್ಗಾ, ಬೀದರ, ರಾಯಚೂರ, ಬೆಳಗಾಂವಿ ಜಿಲ್ಲೆಗಳ ಹಾಡುಗಾರರಲ್ಲಿ ಸೇರಿಕೊಂಡಿವೆ. ಬಿಜಾಪುರ ಜಿಲ್ಲೆಯೊಂದರಲ್ಲೇ ಇಂಡಿ, ಸಿಂದಗಿ, ಬಾಗೇವಾಡಿ, ಮುದ್ದೇಬಿಹಾಳ, ಹುನಗುಂದ, ಬದಾಮಿ, ಬಾಗಲಕೋಟ ತಾಲ್ಲೂಕುಗಳಲ್ಲಿ ಕೇಳಿಬರುತ್ತವೆ."[೨] ಬೀ ಬೀ ಇಂಗಳಗಿ ಸಂಪ್ರದಾಯದ ಗೀಗೀ ಪದಗಳಲ್ಲಿ, ಈತನ ಶಿಷ್ಯ ವರ್ಗದ ಹಾಡುಗಾರರಲ್ಲಿ ಹಸನ್‌ಸಾಹೇಬನ ಹಾಡುಗಳೇ ವಿಪುಲವಾಗಿರುವುದನ್ನು ಗುರುತಿಸಬಹುದು.

ಬಿಜಾಪುರ ಸಿದ್ದವ್ವಾ, ಬಬಲೇಶ್ವರದ ಬಂಗಾರೆವ್ವಾ , ಶಾಂತವ್ವಾ , ಡೋಣೂರ ಎಲ್ಲವ್ವಾ , ಮಡಿಕೇಶ್ವರದ ಶಾಂತವ್ವಾ , ಮಡ್ನಳ್ಳಿ ಭೀಮವ್ವ , ಕನಾಳದ ರಾಮುಸಿಂಗ, ಉತ್ನಾಳದ ಸಂಗವ್ವಾ, ಕಂಬಾಗಿಯ ಹಣುಮವ್ವ , ಕೆಸರಗೊಪ್ಪದ ಲಕ್ಕವ್ವ , ಬಿಕ್ಕಟ್ಟಿಯ ರಾಣವ್ವ , ಹಂದಿಗುಂದದ ಮಹಾದೇವಿ, ಅಬ್ಬಾಳದ ಪರಶುರಾಮ ಬಡಿಗೇರ, ಅಥಣಿಯ ವಸಂತ ಹೊಸಮನಿ ಮೊದಲಾದವರು ಹಸನ್‌ಸಾಹೇಬನ ಗೀಗೀ ಪದಗಳನ್ನೇ ಹಾಡುತ್ತಿರುವುದನ್ನು ನೋಡಬಹುದು.

ಹಸನ್‌ಸಾಹೇಬನು ಗುರುಕುಲಕ್ಕೆ ಸೇರಿದವನು. ಆತನ ಗೀಗೀ ಪದಗಳು 'ನಾಗೇಶಿ'ಯವರೆಗೆ ದಾರಿದೀಪವಾದವು. ಹಸನ್ ಬದುಕಿರುವಾಗಲೇ ದಂತಕತೆಯಾಗಿ ಹೋದ ವ್ಯಕ್ತಿ. ಅವನ ಶಿಷ್ಯ ಪ್ರಶಿಷ್ಯರ ಪಡೆಯು ಅಪಾರ ಸಂಖ್ಯೆಯಲ್ಲಿ ನಿರ್ಮಾಣವಾಯ್ತು. ೧೯೦೮ರಲ್ಲಿ ಹಸನ್ ಪೈಗಂಬರ ವಾಸಿಯಾದನು. "ವಸ್ತಾದ ಹಸನ್ ವಜ್ರದ ಕಿರಣ ॥

ಸೂರ್ಯ-ಚಂದ್ರಾರಿರುವ ತನಕ ಇಲ್ಲ ಅವನ ಮರಣ"ವೆಂಬ ಮಾತು ದಿಟವಾಗಿದೆ. ಇದು ಆತನಿಗೆ ಸಲ್ಲಿಸಿದ ಶ್ರದ್ಧಾಂಜಲಿಯಾಗಿದೆ.

೨ : ೨. ಶೇಖ ಮುಕ್ತುಮಶಾ (ಕ್ರಿ.ಶ. ೧೮೭೮-೧೯೨೦) :

ಗೀಗೀ ಹಾಡುಗಾರಿಕೆ ಸಲುವಾಗಿ ತನ್ನ ಇಡೀ ಜೀವಮಾನವನ್ನೇ ಮುಡುಪಾಗಿಟ್ಟ ವ್ಯಕ್ತಿಯೀತ. ಬೀ ಬೀ ಇಂಗಳಗಿ ಸಂಪ್ರದಾಯದ ಹಾಡಿನ ಸಾಹಿತ್ಯದ ವೈಭವಕ್ಕೆ ಮುಕ್ತುಮಶಾನ ಕೊಡುಗೆ ಅನನ್ಯವಾಗಿದೆ. "ಹಲವಾರು ವರುಷಗಳವರೆಗೆ ನೂರಾರು ಲಾವಣಿಗಳನ್ನು ರಚಿಸಿ, ಬೀ. ಬೀ. ಇಂಗಳಗಿ ಗೀಗೀ ಸಂಪ್ರದಾಯದ ಗೀಗೀ ಮೇಳಗಳಿಗೆ ಊರುಗೋಲಾಗಿ ನಿಂತ ವ್ಯಕ್ತಿಯೀತ"[೩] ಎಂಬ ಮಾತು ಶೇಖ ಮುಕ್ತುಮಶಾನ ಮಹತ್ವವನ್ನು ಅರಹುತ್ತದೆ.

೨ : ೩. ಲಾಳೇಶಾ (ಕ್ರಿ.ಶ. ೧೮೭೦ - ೧೯೫೦) :

ಹಸನ್-ಸಾಹೇಬನ ತರುವಾಯ ಆತನ ಒಡನಾಡಿಯೂ, ಶಿಷ್ಯನೂ ಆಗಿದ್ದ 'ಲಾಳೇಶಾ' ಗೀಗೀ ಮೇಳವನ್ನು ಸಮರ್ಥವಾಗಿ ಮುನ್ನಡೆಸಿದ್ದಾನೆ. ಆರಂಭದಲ್ಲಿ ಗುರು ಹಸನ್‌ನ ಲಾವಣಿಗಳನ್ನೇ ಹಾಡಿದನು. ಮುಂದೆ ಕಾಲಕಳೆದಂತೆ ಸಂದರ್ಭಕ್ಕನುಸಾರವಾಗಿ, ಪರಿಸರಕ್ಕನುಗುಣವಾಗಿ ಸ್ವತಃ ಲಾವಣಿ ರಚನೆಯನ್ನಾರಂಭಿಸಿದನು. ಆತನ ಗೀಗೀ ಪದಗಳು ವ್ಯಾಪಕವಾಗಿ ಪ್ರಚಾರ ಪಡೆದ ಮೇಲೆ ಕೇವಲ ತನ್ನ ಹಾಡುಗಳನ್ನೇ ಹಾಡುತ್ತ ಹೋಗದೆ, ತನ್ನ ಗುರು ಹಸನ್‌ನ ಹಾಡುಗಳನ್ನು ಹಾಡಿದ್ದು ಈತನ ಹೆಚ್ಚುಗಾರಿಕೆಯಾಗಿದ್ದು, ಗುರುಭಕ್ತಿಗೆ ಸಾಕ್ಷಿಯಾಗಿದೆ. ತನ್ನ ಗುರು ಹಸನ್‌ಸಾಹೇಬನ ಕುರಿತಾಗಿ ಲಾಳೇಶಾ ರಚಿಸಿರುವ ಲಾವಣಿ ತುಂಬ ಮಹತ್ವದ ರಚನೆಯಾಗಿದೆ. ಐತಿಹಾಸಿಕ ಸಂಗತಿಯನ್ನು ದಾಖಲಿಸುವುದರಿಂದ ಆ ಹಾಡಿಗೆ ಅತ್ಯಂತ ಪ್ರಾಮುಖ್ಯತೆ ಪ್ರಾಪ್ತವಾಗಿದೆ.

೨ : ೪. ಮಹಮ್ಮದ ಇಮಾಮ್‌ಶಾ (ಕ್ರಿ.ಶ. ೧೮೯೮-೧೯೫೦) :

ಇವೆರಡೂ ಜೋಡಿ ಹೆಸರುಗಳು. ಮಹಮ್ಮದ್ ಬೀ ಬೀ ಇಂಗಳಗಿಯವನಾದರೆ, ಇಮಾಮ್ ಶಾ ಸಿಂದಗೇರಿಯವನು. ಇವರಿಬ್ಬರೂ ಆಪ್ತ ಗೆಳೆಯರು. ಗೀಗೀ ಮೇಳದ ಸಲುವಾಗಿ ಒಗ್ಗೂಡಿದರು. ಇಬ್ಬರೂ ಬೀ ಬೀ ಇಂಗಳಗಿ ಸಂಪ್ರದಾಯದ ಗೀಗೀ ಮೇಳವನ್ನು ಮುಂದುವರೆಸಿಕೊಂಡು ಬರುವಲ್ಲಿ, ಅದರ ಬೆಳವಣಿಗೆಯಲ್ಲಿ, ಅತ್ಯಂತ ನಿರ್ಣಾಯಕ ಪಾತ್ರವನ್ನು ಹೊಂದಿದವರಾಗಿದ್ದಾರೆ.

ಹಸನ್‌ಸಾಹೇಬ ಜೀವಿಸಿರುವಾಗಲೇ ಆತನ ಶಿಷ್ಯ ಪರಂಪರೆ ರೂಪುಗೊಂಡಿತ್ತು. ಕೊರಳ್ಳಿ ಚಂದ್ರು , ಆತನ ಮಗ ಮೌಲಾಲಿ, ಚಾಂದಕವಟೆಯ ನಬಿ ಮತ್ತು ಆತನ ಮಗ ಗುಡೂಶಾ, ಹಸನ್‌ನ ಆಪ್ತ ಬಳಗಕ್ಕೆ ಸೇರಿದವರಾದ ತಾಳೇಶಾ, ಕಾಶೀಮಶಾ ಮುಂತಾದವರು

ತಮ್ಮ ತಮ್ಮ ಮೇಳಗಳೊಂದಿಗೆ ಬೀ ಬೀ ಇಂಗಳಗಿ ಗೀಗೀ ಸಂಪ್ರದಾಯವಾದ 'ಮಲ್ಲಾಹಸನ್' ಪರಂಪರೆಯನ್ನು ಮುಂದುವರೆಸಿದ್ದರು. 'ಮಲ್ಲಾಹಸನ್' ಎಂಬ ಕೊನೆಯ ಮುದ್ರಿಕೆಯಿಂದ ಹಸನ್ ಸಾಹೇಬನ ನಾಗೇಶಿ ಲಾವಣಿಗಳು ಇಂದಿಗೂ ಉತ್ತರ ಕರ್ನಾಟಕದಲ್ಲಿ ಪ್ರಚಾರದಲ್ಲಿವೆ. ಬದುಕಿದ್ದಾಗಲೇ ಆತನ ಶಿಷ್ಯನ ಬಳಗ ಬೆಳೆದಿದ್ದಿತು. ಮೊದ-ಮೊದಲು ಹಸನ್‌ನ ಲಾವಣಿಗಳನ್ನು ಹಾಡುತ್ತಲಿದ್ದ ಈ ವೃತ್ತಿಗಾಯಕರು ಅನಂತರ ಸ್ವಂತ ಲಾವಣಿಗಳನ್ನು ಕಟ್ಟಲು ತೊಡಗಿದರು. ಅಂತಹವರಲ್ಲಿ ಕೋರಳ್ಳಿಯ ಚಂದ್ರು ಆತನ ಮಗ ಮೌಲಾಲಿ. ಚಾಂದಕವಟೆಯ ನಬಿ ಮತ್ತು ಆತನ ಮಗ ಗುಡುಶಾ, ಹಸನ್‌ರ ಆಪ್ತ ವರ್ಗಕ್ಕೆ ಸೇರಿದ್ದ ಲಾಳೇಶಾ, ಕಾಸೀಮಶಾ ಇವರನ್ನು ಗಣ್ಯರೆನ್ನಬಹುದು. 'ಮಲ್ಲಾಹಸನ್' ಪರಂಪರೆಯನ್ನೇ ಮುಂದುವರೆಸಿದವರು ಕೊನೆಯ ಇಬ್ಬರು. ಕೋರಳ್ಳಿಯ ಹಾಡುಗಳೂ ಚಾಂದಕವಟೆಯ ಹಾಡೂಗಳೂ ಕ್ರಮವಾಗಿ 'ಮೌಲಾಲಿ' ಹಾಗೂ 'ಗುಡೂಲಾಲ' ಮುದ್ರಿಕೆಗಳಲ್ಲಿ ಪ್ರತ್ಯೇಕವಾಗಿ ಹುಟ್ಟಿ ಪ್ರಸಿದ್ಧವಾದವು. ನಾಗೇಶಿ ಸಂಪ್ರದಾಯವನ್ನು ಈ ಭಾಗದಲ್ಲಿ ಸಮರ್ಥವಾಗಿ ಪ್ರಚಾರಪಡಿಸಿ ಜನಪ್ರಿಯತೆಯನ್ನು ಗಳಿಸಿಕೊಂಡವರಲ್ಲಿ ಗುಡೂಲಾಲನನ್ನು ಹೆಸರಿಸಬೇಕಾಗುತ್ತದೆ. ತನ್ನ ವಾದದ ಜಾಣ್ಮೆ ಹಾಗೂ ಆಶುಕವಿತ್ವದಿಂದ ಕೆಲಕಾಲ ಈತ ಬಿಜಾಪುರಜಿಲ್ಲೆ ಹಾಗೂ ನೆರೆಯ ಪ್ರದೇಶದಲ್ಲಿ ನಾಗೇಶ ಲಾವಣಿಯ ಪ್ರಭುತ್ವ ಪಡೆದಿದ್ದನು."[೪] ಈ ಮಾತುಗಳು ಒಟ್ಟು ಇಂಗಳಗಿ ಪರಂಪರೆಯ ಪಕ್ಷಿನೋಟವನ್ನು ಸೂಚಿಸುತ್ತದೆ.

*** ಬೀ ಬೀ ಇಂಗಳಗಿ ಸಂಪ್ರದಾಯದ ಗೀಗೀ ಮೇಳಗಳು :**

ಬೀ ಬೀ ಇಂಗಳಗಿ, ಮುಳಸಾವಳಗಿ, ಕೋರಳಿ, ಚಾಂದಕವಟೆ, ಡೋಣೂರು, ನಂದ್ಯಾಳ, ಕರಬಂಟನಾಳ, ಬಾಗೇವಾಡಿ, ಇಂಗಳೇಶ್ವರ, ಹತ್ತರಕಿಹಾಳ, ತಳೇವಾಡ, ಸಿಂದಗೇರಿ, ಕೆಳಕೇರಿ, ಪಡಗಾನೂರ, ಸಾಲೋಟಗಿ, ವಡವಡಗಿ, ತಾಳಿಕೋಟಿ, ವಿಜಾಪುರ, ವಂದಾಲ, ಕನಾಳ, ಧನ್ಯಾಳ, ದಾಸ್ಯಾಳ, ಹಲಗಣಿ, ಕಾರಜೋಳ, ಬದಾಮಿ, ಕಡ್ಲಿಮಟ್ಟಿ, ಮರೋಳ ಮತ್ತು ಉತ್ನಾಳ ಮುಂತಾದವುಗಳು ಪ್ರಮುಖ ಸ್ಥಳವಾಗಿವೆ.

ಸಮಾರೋಪ :

ಬೀ ಬೀ ಇಂಗಳಗಿ ಗೀಗೀ ಮೇಳಗಳು ಉತ್ತರ ಕರ್ನಾಟಕದ 'ಗೀಗೀ' ಸಂಪ್ರದಾಯದ ಇತಿಹಾಸದಲ್ಲಿ ತಮ್ಮದೇ ಆದ ಸ್ಥಾನ-ಮಾನ ಗಳಿಸಿವೆ. ಈ ಮೇಳ ಹಾಡುಗಾರಿಕೆಗೆ ಸಾಮಾಜಿಕ-ಧಾರ್ಮಿಕ, ಆಧ್ಯಾತ್ಮಿಕ ವಸ್ತುವನ್ನು ಯಥೇಚ್ಛವಾಗಿ ಬಳಸಿಕೊಂಡಿರುವುದರಿಂದ ಜನಪ್ರಿಯತೆಯ ಉತ್ತುಂಗ ಶಿಖರ ತಲುಪಿದವು. "ರಾಷ್ಟ್ರೀಯ ಭಾವೈಕ್ಯದ ದೃಷ್ಟಿಯಿಂದ ವಿಶೇಷವಾಗಿ ಶ್ಲಾಘಿಸಬೇಕಾದ ಸಂಗತಿಯೆಂದರೆ ನಮ್ಮ ಗೀಗೀ ಸಂಪ್ರದಾಯವನ್ನು

ಬೆಳೆಸಿದವರಲ್ಲಿ ಮಹಮ್ಮದೀಯರು ವಿಪುಲ ಸಂಖ್ಯೆಯಲ್ಲಿದ್ದಾರೆ. ಅಷ್ಟೇ ಅಲ್ಲ, ಅವರು ನಮ್ಮ ಹಿಂದೂ ಪುರಾಣ, ಆಧ್ಯಾತ್ಮ ಹಾಗೂ ದೇವ ದೇವತೆಗಳ ಬಗೆಗೆ ಆತ್ಮೀಯವಾದ ಪರಿಜ್ಞಾನವನ್ನು, ಶ್ರದ್ಧಾಗೌರವವನ್ನು ಹೊಂದಿದವರಾಗಿದ್ದಾರೆ. ಹಸನಸಾಹೇಬನು ವೀರಶೈವ ಮತ ವಿಶಿಷ್ಟವಾದ ಷಟ್‌ಸ್ಥಲ ಅಷ್ಟಾವರಣ ದೀಕ್ಷಾದಿಗಳ ಬಗೆಗೆ ಪಡೆದಿದ್ದ ಜ್ಞಾನ ಬೆರಳು ಕಚ್ಚಿಸುವಂತಹುದು"[೫] ಎಂಬ ಮಾತುಗಳು ಮನನೀಯವಾಗಿವೆ. ಇಂದಿಗೂ ಹರದೇಶಿ-ನಾಗೇಶಿ ಗೀಗೀ ಮೇಳಗಳು ತಮ್ಮ ವಿಶೇಷತೆಯಿಂದಾಗಿ ಜನಪ್ರಿಯವಾಗಿವೆ. "ಬೀ. ಬೀ. ಇಂಗಳಗಿ, ಕೋರಳ್ಳಿ, ಚಾಂದಕವಟೆ ಮತ್ತು ಕಡಣಿಯ ಹಾಡುಗಳು ಈಗಲೂ ಪ್ರಚಾರದಲ್ಲಿರುವುದು ಆ ಕವಿಗಳ ಶಕ್ತಿ ಸಂಪನ್ನತೆಯನ್ನು ಎತ್ತಿ ತೋರಿಸುತ್ತವೆ."[೬] ಎಂಬುದು ಈ ಸಂಪ್ರದಾಯದ ಸತ್ವಕ್ಕೆ ಕನ್ನಡಿಯಾಗಿದೆ.

ಅಡಿ ಟಿಪ್ಪಣಿಗಳು :

೧. ಡಾ. ಬಿ. ಎಸ್. ಕೋಟ್ಯಾಳ – ಬೀ ಬೀ ಇಂಗಳಗಿ ಸಂಪ್ರದಾಯದ ಗೀಗೀ ಪದಗಳು, ಪುಟ : ೧೦೦

೨. ಡಾ. ಬಿ. ಎಸ್. ಕೋಟ್ಯಾಳ – ಬೀ ಬೀ ಇಂಗಳಗಿ ಸಂಪ್ರದಾಯದ ಗೀಗೀ ಪದಗಳು, ಪುಟ : ೧೧೫

೩. ಡಾ. ಬಿ. ಎಸ್. ಕೋಟ್ಯಾಳ – ಬೀ ಬೀ ಇಂಗಳಗಿ ಸಂಪ್ರದಾಯದ ಗೀಗೀ ಪದಗಳು, ಪುಟ : ೧೧೭

೪. ಡಾ. ಬಿ. ಬಿ. ಹೆಂಡಿ – ಜಾನಪದ ಸಾಹಿತ್ಯ ದರ್ಶನ, (ಸಂಪುಟ :೫) ಪುಟ : ೧೬೪

೫. ಬೀ ಬೀ ಇಂಗಳಗಿ ಭಾಗದ ಲಾವಣಿಕಾರರು, – ಜಾನಪದ ಸಾಹಿತ್ಯ ದರ್ಶನ, ಪುಟ : ೧೬೫

೬. ಬೀ ಬೀ ಇಂಗಳಗಿ ಭಾಗದ ಲಾವಣಿಕಾರರು, – ಜಾನಪದ ಸಾಹಿತ್ಯ ದರ್ಶನ, ಪುಟ : ೧೭೧

----- ✾ -----

೩. ಹಲಸಂಗಿ ಭಾಗದ ಗೀಗೀ ಮೇಳಗಳು

'ಹಲಸಂಗಿ' ಹೊಸಗನ್ನಡಸಾಹಿತ್ಯದ ನವೋದಯಪರಿಸರದಲ್ಲಿ ಮಹತ್ತರವಾದ ಸ್ಥಾನ ಪಡೆದಿದೆ. ಅನುಭಾವ ಕವಿ ಮಧುರಚೆನ್ನ, ಜಾನಪದ ಸಾಹಿತಿ ಸಿಂಪಿ ಲಿಂಗಣ್ಣ, ಕಾಪಸೆ ರೇವಪ್ಪ, ಪಿ. ಧೂಲಾಸಾಹೇಬ ಮುಂತಾದವರಿಂದ ಕೂಡಿದ ಹಲಸಂಗಿಯ 'ಗೆಳೆಯರ ಬಳಗ'ವು ಮಾಡಿದ ಸಾಧನೆ ಅನುಪಮವಾಗಿದೆ. ಧಾರವಾಡದಲ್ಲಿ 'ಗೆಳೆಯರ ಗುಂಪು' ಮಾಡಿದ ಮಹತ್ ಕಾರ್ಯವನ್ನು ಗ್ರಾಮಾಂತರಪ್ರದೇಶದಲ್ಲಿ ಹಲಸಂಗಿ 'ಗೆಳೆಯರ ಬಳಗ' ನಿರ್ವಹಿಸಿರುವುದು ವಿಶೇಷವೆನಿಸುತ್ತದೆ. ಈ ಭಾಗದ ಲಾವಣಿಕಾರರ ಸಾಧನೆಯು ಬೆರಗುಗೊಳಿಸುವಂತಿದೆ.

"ಹಲಸಂಗಿ ಭಾಗದ ಲಾವಣಿಕಾರರು ಎಲ್ಲ ಜನಪದ ಕವಿಗಳಂತೆ ತಮ್ಮ ಪರಿಮಿತಿಯಲ್ಲಿ ಜೀವನದ ಸುಖ-ದುಃಖಗಳ ಕುರಿತು ಹಾಡಿದರು. ಇವರ ರಚನೆಯಲ್ಲಿ ಶೃಂಗಾರರಸಕ್ಕೆ ಪ್ರಾಧಾನ್ಯ. ಇವರು ಉಂಡುಟ್ಟು ಸುಖವಾಗಿ ಕಾಲ ಕಳೆಯುತ್ತ ರಸಿಕತೆಯನ್ನು ಬೆಳೆಸಿಕೊಂಡಿದ್ದರು. ಅದಕ್ಕಾಗಿಯೇ ಇವರು ಯಾವ ಮಡಿವಂತಿಕೆಯೂ ಇಲ್ಲದೆ ಸ್ತ್ರೀ-ವರ್ಣನೆಯನ್ನು ಮಾಡಿದ್ದಾರೆ. ಶಿಷ್ಟ ಕಾವ್ಯದಲ್ಲಿ ಕೃತ್ರಿಮವೆನ್ನಿಸಬಹುದಾದ ಉಪಮೆ-ರೂಪಕಗಳು ಇವರು ಮಾಡುವ ಸ್ತ್ರೀವರ್ಣನೆಗಳಲ್ಲಿ ಸ್ವಾಭಾವಿಕವೆನಿಸುತ್ತವೆ. ಇವರು ಶೃಂಗಾರ ಪ್ರಧಾನವಾದ ಲಾವಣಿಗಳನ್ನಲ್ಲದೆ ವೀರ ಲಾವಣಿಗಳನ್ನು ರಚಿಸಿದ್ದರು. ಇವರ ಕಾವ್ಯದಲ್ಲಿ ಜೀವನದ ಎಲ್ಲ ಬಗೆಯ ರಚನೆಗಳಿಗೆ ಎಡೆಯುಂಟು. ಎಲ್ಲ ಅಭಿರುಚಿಗಳನ್ನು ತಣಿಸುವ ಹವಣಿಕೆಯುಂಟು"[೧] ಎನ್ನುವ ಡಾ. ವೀರೇಂದ್ರ ಸಿಂಪಿಯವರ ಮಾತುಗಳು ಹಲಸಂಗಿ ಭಾಗದ ಲಾವಣಿಕಾರರನ್ನು ಸಮರ್ಥವಾಗಿ ಪರಿಚಯಿಸುತ್ತವೆ.

ಸಿಂಪಿ ಲಿಂಗಣ್ಣನವರು ಸಂಪಾದಿಸಿದ 'ಜೀವನ ಸಂಗೀತ'ವು ಎಂಟು ಜನ ಲಾವಣಿಕಾರರ ಲಾವಣಿಗಳನ್ನು ಒಳಗೊಂಡಿರುವ ಗ್ರಂಥ. ಇದರಲ್ಲಿ ಹಲಸಂಗಿ ಹಾಗೂ ಬಿಜಾಪುರ ಪ್ರದೇಶದ ಲಾವಣಿಕಾರರ ರಚನೆಗಳಿವೆ. ಸಂಗೂ ರಾಯಣ್ಣ, ಶಿದ್ದು ಶಿವಲಿಂಗ, ಖಾಜಾಬಾಯಿ ಮತ್ತು ಸಂಕದ ಬಸಯ್ಯ ಹಲಸಂಗಿ ಭಾಗದ ಲಾವಣಿಕಾರರಲ್ಲಿ ಎದ್ದು ಕಾಣುವ ಪ್ರತಿಭಾವಂತರಾಗಿದ್ದಾರೆ.

೩ : ೧. ಸಂಗೂ ರಾಯಣ್ಣ :

ಈತ ಹಲಸಂಗಿಯ ಪರಂಪರೆಗೆ ಶ್ರೀಕಾರ ಹಾಕಿದ ಲಾವಣಿಕಾರ. ಗೀಗೀ ಮೇಳಗಳನ್ನು ಸಂಘಟಿಸಿದ 'ಹರದೇಶಿ' ಸಂಪ್ರದಾಯದವನೀತ. ವೃತ್ತಿಯಿಂದ ಕೃಷಿಕನಾದರೂ

ಪ್ರವೃತ್ತಿಯಿಂದ ಜಾನಪದ ಹಾಡುಗಾರ. ಗೀಗೀ ಮೇಳಗಳ ಸಂಘಟಕ. ಸ್ವತಃ ಲಾವಣಿಗಳನ್ನು ರಚಿಸಿದಾತ. 'ಗೋಕುಲಾಷ್ಟಮಿ'ಯು ಸಂಗೂರಾಯಣ್ಣನ ಸುಪ್ರಸಿದ್ಧ ಲಾವಣಿಯಾಗಿದೆ. "ಕವಿ ಸಂಗಣ್ಣನ ಲಾವಣಿ ಕೇಳಿರಿ ಜನಾ" ಎಂದು ಲಾವಣಿ ಮುಕ್ತಾಯವಾಗುತ್ತದೆ. ಸಂಗೂರಾಯಣ್ಣ ಹೆಚ್ಚು ಕಲಿಯದಿದ್ದರೂ, ಆಸಕ್ತಿಯಿಂದ ಪುರಾಣ–ಕಾವ್ಯ ವಸ್ತುಗಳನ್ನು ಗ್ರಹಿಸುತ್ತಿದ್ದ ವ್ಯಕ್ತಿ. ಹಲಸಂಗಿಯಲ್ಲಿರುವ ಹಿರಿಯರಿಂದ ಶಾಸ್ತ್ರ–ಪುರಾಣ–ಕಾವ್ಯಗಳ ವಸ್ತುಗಳನ್ನು ತಿಳಿದುಕೊಳ್ಳುತ್ತಿದ್ದನಂತೆ. ಸಂಗೂರಾಯಣ್ಣನ ಮೊಮ್ಮಗ ಗೋಕುಲಾಷ್ಟಮಿಯನ್ನು ಹಾಡುತ್ತಿದ್ದನೆಂದು ತಿಳಿದು ಬರುತ್ತದೆ.

ಗೋಕುಲಾಷ್ಟಮಿ ಒಂದು ಸುಂದರವಾದ ಕಾವ್ಯ. ವೈಷ್ಣವಭಕ್ತಿಯನ್ನು ಪ್ರತಿಪಾದಿಸುವ ಲಾವಣಿ. ಗೋಪಿಕಾಸ್ತ್ರೀಯರು ಶ್ರೀ ಕೃಷ್ಣನನ್ನು ಹುಡುಕುತ್ತ ಯಮುನಾನದಿಯ ದಂಡೆಗೆ ಹೋದದ್ದೇ ಈ ಲಾವಣಿಯ ಕಾವ್ಯವಸ್ತು. ಯಶೋಧೆಯ ಮಧುರವಾತ್ಸಲ್ಯಭಾವ, ಗೋಪಿಕಾಸ್ತ್ರೀಯರ ಆರ್ತಸ್ಥಿತಿ ಕೃಷ್ಣನ ಲೀಲೆಗಳೆಲ್ಲ ಈ ಲಾವಣಿಯಲ್ಲಿ ಸುವ್ಯಕ್ತವಾಗಿವೆ. ಸಂಗೂರಾಯಣ್ಣ ಕಾವ್ಯದಲ್ಲಿ ಉಪಯೋಗಿಸಿದ ಶಬ್ದಗಳು ಭಾವವನ್ನು ಅಭಿನಯಿಸಿ ಹೇಳುತ್ತವೆ. ಹೊಚಗೊಂಡು ಮುಚಗೊಂಡು ತರುಬಿದಾ ಮೊದಲಾದ ಆಡುನುಡಿಗಳನ್ನು ಶಂಖ ಹೊಡಿದಾಳ, ಶೋಕ ಮಾಡ್ಯಾಳ, ಬಟ್ಟ ಮುರಿದು ಸಿಟ್ಟ ಮಾಡ್ಯಾಳ ಎನ್ನುವಲ್ಲಿ ಮಡಿವಂತಿಕೆಯಿಲ್ಲದೆ ಮಾತುಗಳನ್ನು ಕವಿ ಬಳಸಿದ್ದಾನೆ. ಗೋಪಿಕಾಸ್ತ್ರೀಯರ ಸಾಮೂಹಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವರ್ಣಿಸುವುದರ ಮೂಲಕ ಕವಿ ತನ್ನ ಜಾನಪದ ಸತ್ವವನ್ನು ವ್ಯಕ್ತಪಡಿಸುತ್ತಾನೆ". ಎಂಬ ಮಾತುಗಳು ಸಮಂಜಸವಾಗಿವೆ.

ಸಂಗೂರಾಯಣ್ಣ ಹಲಸಂಗಿ ಸಂಪ್ರದಾಯದ ಗೀಗೀ ಮೇಳಗಳಿಗೆ ಹಾಗೂ ಲಾವಣಿಕಾರರ ಪರಂಪರೆಗೆ ಸುಭದ್ರ ಬುನಾದಿ ಹಾಕಿ, ಹರದೇಶಿಯವರ ಗುಂಪನ್ನು ಸಮರ್ಥವಾಗಿ ಸಂಘಟಿಸಿ, ಯಶಸ್ವಿಯಾಗಿ ಮುನ್ನಡೆಸಿದಾತನೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

೩ : ೨. ಶಿದ್ದು ಶಿವಲಿಂಗ :

ಹಲಸಂಗಿ ಪರಂಪರೆಯಲ್ಲಿ 'ಶಿದ್ದು ಶಿವಲಿಂಗ'ನದು ಮತ್ತೊಂದು ಹೆಸರು. 'ನಾಗೇಶಿ' ಸಂಪ್ರದಾಯದ ಲಾವಣಿಕಾರ. ನಾಗೇಶಿ ಪರಂಪರೆಯ ಪ್ರತಿಪಾದಕನಾದ ಶಿದ್ದು ಶಿವಲಿಂಗ, ಹರದೇಶಿ ಪರಂಪರೆಯ ಸಂಗೂರಾಯಣ್ಣ ಪ್ರತಿಸ್ಪರ್ಧಿಯಾಗಿ ರೂಪುಗೊಂಡವನು.

ಹಲಸಂಗಿಯ 'ಜಕ್ಕೊಂಡಿ' ಮನೆತನದಲ್ಲಿ ಹುಟ್ಟಿ ಬೆಳೆದ ಶಿದ್ದು ಶಿವಲಿಂಗ 'ಭೀಷ್ಮಪರ್ವ' ಮತ್ತು 'ಕೃಷ್ಣಲೀಲೆ' ಲಾವಣಿಗಳನ್ನು ರಚಿಸಿದ್ದಾನೆ. ತನ್ನ ಲಾವಣಿಗಳಲ್ಲಿ 'ನಾಗನಾಥ'ನನ್ನು ಸ್ಮರಿಸಿಕೊಳ್ಳುವುದನ್ನು ಕಾಣುತ್ತೇವೆ. "ಭೀಷ್ಮಪರ್ವದಲ್ಲಿ ಭಾವಗಂಗೆಯ ಗಂಭೀರಗತಿಯು ಕೇಳುಗರಲ್ಲಿ ಏಕತಾನತೆಯನ್ನು ಕುದುರಿಸುತ್ತದೆ. ಕೃಷ್ಣಲೀಲೆಯಂತೂ ಸಂಗೂರಾಯಣ್ಣನ ಗೋಕುಲಾಷ್ಟಮಿಗೆ ಹಾಡಿದ ತೋಡಿಯಾಗಿದೆ." ಎಂಬ ಮಾತುಗಳು ಎರಡರ ವಿಶೇಷತೆಯನ್ನು ಅರ್ಥಪೂರ್ಣವಾಗಿ ವಿವರಿಸುತ್ತವೆ.

ಕವಿ ಸಿದ್ದು ಶಿವಲಿಂಗ ತನ್ನ ಲಾವಣಿಗಳಲ್ಲಿ ಭಾಷೆಯ ಸರ್ವಸಾಧ್ಯತೆಗಳನ್ನು ಸಮರ್ಥವಾಗಿ ದುಡಿಸಿಕೊಂಡಿದ್ದಾನೆ. ಆತ ಬಳಸಿದ ಪದಗಳು ಆಡು-ನುಡಿಯ ಸೊಗಡಿನಿಂದ ಕೂಡಿದ್ದು, ಜಾನಪದರ ಮನಸ್ಸೂರೆಗೊಳ್ಳುವಲ್ಲಿ ಯಶಸ್ಸುಗಳಿಸಿವೆ. "ನಮ್ಮ ಭಾಷೆ ಕಳಪೆಯಾಗಿ ಹೋದಾಗ ಸಿದ್ದು ಶಿವಲಿಂಗನಂಥ ಲಾವಣಿಕಾರರ ಭಾಷಾಪ್ರಯೋಗ ಭಾಷೆಗೆ ಹೊಸ ಜೀವಕಳೆ ಕೊಡಬಲ್ಲದು. ಪುರಾಣ ಪ್ರಸಂಗಗಳನ್ನು ಹಳ್ಳಿಗರ ದೃಷ್ಟಿಯಲ್ಲಿ ಕಾಣುವ ಇವನಲ್ಲಿ ಹಲಸಂಗಿಯ ಉಳಿದ ಲಾವಣಿಕಾರರಿಗಿಂತ ಹೆಚ್ಚಿನ ಜಾನಪದ ಸತ್ವವನ್ನು ಕಾಣುತ್ತೇವೆ." ಎಂಬ ಮಾತುಗಳು ಗಮನಾರ್ಹವಾಗಿದೆ.

ಸಂಗೂರಾಯಣ್ಣ ಹಾಗು ಶಿದ್ದು ಶಿವಲಿಂಗರಿಬ್ಬರೂ ಸಮಕಾಲೀನರು. ಇವರು ತೋಡಿಗೆ-ತೋಡಿ, ಹಾಡುಕಟ್ಟಿ ಹಾಡಿದರು. ಇವರು ನಡೆಸಿಕೊಡುವ ಹರದೇಶಿ-ನಾಗೇಶಿ ಗೀಗೀ ಪದಗಳಿವೆಯೆಂದರೆ ಜನ ಜಾತ್ರೆಯಂತೆ ಸೇರುತ್ತಿದ್ದರು. ಜಿದ್ದಾ-ಜಿದ್ದಿನ ಸ್ಪರ್ಧೆ ನಡೆಯುವಾಗ, ಪ್ರೇಕ್ಷಕರು ಖುದ್ದಾಗಿ ಪಾಲ್ಗೊಳ್ಳುತ್ತಿದ್ದರು. 'ಸವಾಲ್-ಜವಾಬ್' ಹಾಡುಗಳನ್ನು ಕೇಳಿ ಜನ ಸಂತಸಗೊಳ್ಳುತ್ತಿದ್ದರು. ಎರಡೂ ಮೇಳಕ್ಕೂ ಪ್ರೋತ್ಸಾಹ ಕೊಡುತ್ತಿದ್ದರು. ಈ ಅಂಶ ಅವರಿಬ್ಬರ ವೈಯಕ್ತಿಕ ಸಾಮರ್ಥ್ಯ ಮತ್ತು ಹಲಸಂಗಿ ಗೀಗೀ ಮೇಳಗಳ ದಟ್ಟ ಪ್ರಭಾವವನ್ನು ಕಾಣಬಹುದು.

೩.೩. ಖಾಜಾಬಾಯಿ :

ಖಾಜಾಬಾಯಿ ಹಲಸಂಗಿ ಲಾವಣಿಕಾರರಲ್ಲಿಯೇ ಅತ್ಯಂತ ಪ್ರತಿಭಾಸಂಪನ್ನನೀತ. ಅತೀ ಹೆಚ್ಚು ಲಾವಣಿ ರಚಿಸುವುದರ ಮೂಲಕ ಹಲಸಂಗಿ ಪರಂಪರೆಯಲ್ಲಿಯೇ ಎದ್ದು ಕಾಣುವ ಭವ್ಯ ವ್ಯಕ್ತಿತ್ವ ರೂಪಿಸಿಕೊಂಡವನೀತ. ಅಪಾರ ಪರಿಶ್ರಮದಿಂದ ಮೇಲೇರಿ ಬಂದಾತ.

ಖಾಜಾಬಾಯಿ ಸಂಗೂರಾಯಣ್ಣನನ್ನು ಗುರುಸ್ವರೂಪಿಯಾಗಿ ಕಂಡು ಆರಾಧಿಸಿದಾತ. ಹಲಸಂಗಿ ಪರಂಪರೆಯನ್ನು ಮುಂದುವರೆಸಿದವರಲ್ಲಿ ಅಗ್ರಪಂಕ್ತಿಯಲ್ಲಿದ್ದಾನೆ. ಸಂಗೂರಾಯಣ್ಣ ಖಾಜಾಬಾಯಿಯ ಗುರುವಾದರೂ ಈತನ ಲಾವಣಿಗಳು 'ದಾದಾಸಾಹೇಬ ಪೀರ'ನ ಸ್ಮರಣೆಯೊಂದಿಗೆ ಮುಕ್ತಾಯಗೊಳ್ಳುವುದು ವಿಶೇಷ ಅಂಶವಾಗಿದೆ.

ಹಲಸಂಗಿ ಜಾತ್ರೆಯಲ್ಲಿ ಹದರಿಗ್ರಾಮದ 'ಬಡೇಶಾ' ನೆಂಬ 'ನಾಗೇಶಿ' ಪಕ್ಷದ ಲಾವಣಿಕಾರ ಜನ ಬೆರಗಾಗುವಂತೆ ಗೀ ಗೀ ಮೇಳ ನಡೆಸಿಕೊಟ್ಟನಂತೆ. ಅವನ ಪ್ರತಿಸ್ಪರ್ಧಿಯಾಗಿ ನಿಂತು, 'ಹರದೇಶಿ' ಪರವಾಗಿ ಹಾಡಿದ ಖಾಜಾಬಾಯಿ ಸೋತು ಹೋದನಂತೆ. ಖಾಜಾಬಾಯಿ ಗೀಗೀ ಮೇಳಕ್ಕಾದ ನಿರ್ಣಾಯಕ ಸೋಲು, ಆತನ ದಿಕ್ಕು ದೆಸೆಯನ್ನೇ ಬದಲಾಯಿಸಿತು. 'ಹದರಿ' ಯ ಬಡೇಶಾನ ನಾಗೇಶಿ ಪಂಥವನ್ನು ಸೋಲಿಸಬೇಕೆಂಬ ಏಕೈಕ ಛಲತೊಟ್ಟನು. ಅದಕ್ಕಾಗಿಯೇ ತನ್ನ ಹೊಲ-ಮನೆ, ಆಸ್ತಿ-ಪಾಸ್ತಿ ಮಾರಿಕೊಂಡು ಲಾವಣಿ ಮೇಳಕ್ಕಾಗಿ ತೊಡಗಿಸಿಕೊಂಡ. ಗೀಗೀ ಮೇಳದ ಸಂಘಟನೆಗಾಗಿ ಸಮರ್ಪಿಸಿಕೊಂಡನಂತೆ. ಹಲವು ಜಾತ್ರೆ-ಉತ್ಸವಗಳಲ್ಲಿ ಇಬ್ಬರೂ ಎದುರಾದರೂ ಖಚಿತ ನಿರ್ಣಯ ಹೊರಬರಲಿಲ್ಲ. ಅವಕಾಶಕ್ಕಾಗಿ ಖಾಜಾಬಾಯಿ ಕಾಯುತ್ತಿದ್ದ. ಅಂತಹ ಸಂದರ್ಭ ಬಂದೇ ಬಿಟ್ಟಿತು. ತಲ್ಲಣಗಿ ಗ್ರಾಮದಲ್ಲಿ ಏಳು ದಿನಗಳವರೆಗೆ ತುರುಸಿನ ಸ್ಪರ್ಧೆ ನಡೆದು ಹರದೇಶಿ ಹಾಡುಗಾರ ಖಾಜಾಬಾಯಿ "ಈ ದೇಹವೆಂಬುದು ಹೆಣ್ಣು, ಜೀವವೆಂಬುದು ಗಂಡು. ದೇಹ ಮಣ್ಣಾದಾಗ ಜೀವ ಆಕಾಶದತ್ತ ಹೋಗುವುದು" ಎಂದು ವಾದಿಸಿ ವಿಜಯದುಂದುಭಿ ಮೊಳಗಿಸಿದನು. ಸೋತು ಸುಟ್ಟ-ಸುಣ್ಣದಂತಾದ ಬಡೇಶಾ ಖಾಜಾಬಾಯಿಯನ್ನು ತನ್ನ ಗುರುವೆಂದು ಕರೆದು ಗೌರವಿಸಿದನಂತೆ.[೫] ಮಾನ ಸನ್ಮಾನ ಮಾಡಿದನೆಂದು ತಿಳಿದುಬರುತ್ತದೆ.

ಖಾಜಾಬಾಯಿ ಹರದೇಶಿ ಲಾವಣಿಕಾರ. ಪುರುಷನೇ ಶ್ರೇಷ್ಠನೆಂದು ಪ್ರತಿಪಾದಿಸುವಾತ. ಈತನ ಲಾವಣಿಗಳ ಮೊದಲ ಚಕ್ರದಲ್ಲಿ ಹೆಣ್ಣಿನ ಸೌಂದರ್ಯದ ಆರಾಧನೆಯಿದೆ.

"ಹೆಣ್ಣಸಲಜಾತ ಪದ್ಮಿನೀ
ಸುರತ ಚಂದ್ರುಣಿ
ಹೊರಟೆ ನಾಗಿಣೀ ನಾಜೂಕ ನಿನ ನಡಿಗಿ
ಹೊಳಿನೀರ ಥೇರಿಯ ಹೊಡಿದಂಗ ಒದುತೆ ನಿಲಗಿ"

ಈ ಸಾಲುಗಳನ್ನು ಉಚ್ಚರಿಸುತ್ತಿದ್ದಂತೆ "ಮರಿಗುದುರಿ ಕುಣಿತದಂಥ ನಡಿಗೆಯುಳ್ಳ ಹೊಳಿನೀರ ತೆರೆಹೊಡೆದಂಥ ನಿಲುನಿಯುಳ್ಳ ಸ್ತ್ರೀರೂಪ ಜನಪದ ಕಾವ್ಯದ ಮುಖ್ಯ ಲಕ್ಷಣ"ವೆಂದು[೬] ಸುವಿಖ್ಯಾತ ಜಾನಪದ ವಿದ್ವಾಂಸ 'ಡಾ. ಚಂದ್ರಶೇಖರ ಕಂಬಾರ'ರು ಗುರುತಿಸಿದ್ದಾರೆ.

"ಖಾಜಾ ಕವಿಯು ಲಾವಣಿಯ ಮೂಲಸ್ವರೂಪವನ್ನೇ ಬದಲಿಸಿ, ಅದಕ್ಕೆ ಒಂದು ನೂತನವಾದ ತಿರುವನ್ನು ಕೊಟ್ಟನು. ಆತನ ಕಲ್ಗಿ-ತುರಾಯಿ ಲಾವಣಿಗಳು ವರ್ಣನಾ ವೈಖರಿಗೆ, ಕಲ್ಪಕತೆಗೆ ಹೆಣ್ಣು-ಗಂಡಿನ ನಡುವಿನ ಸ್ವಾರಸ್ಯಕರವಾದ ಚಾತುರ್ಯಕ್ಕೆ ಪ್ರಾಸಾನುಪ್ರಾಸಗಳ ಸೊಬಗಿಗೆ ಪ್ರಸಿದ್ಧವಾಗಿರುವಂತೆ ಕವಿಗೆ 'ಶೃಂಗಾರ ರಸ ಚಕ್ರವರ್ತಿ' ಎಂಬ ಬಿರುದನ್ನು ತಂದುಕೊಟ್ಟಿವೆ"[೭] ಎಂಬ ಮಾತು ನೈಜವಾಗಿದೆ.

ಖಾಜಾಬಾಯಿ ಮುಂದಿನ ಲಾವಣಿಕಾರರಿಗೆ ಚಿನ್ನದ ಗಣಿ, ಹಲಸಂಗಿಯ ಗೀಗೀ ಮೇಳಗಳಿಗೆ ಸ್ಫೂರ್ತಿಶೆಲೆಯಾದವನು. ಧರ್ಮಸಮನ್ವಯವನ್ನು ಸಾಧಿಸಿದವನು. ಉರ್ದು ಪದಗಳನ್ನು ಯಥೇಚ್ಛವಾಗಿ ಬಳಸುವುದರ ಮೂಲಕ ದೇಶೀ ಸತ್ವವನ್ನು ಹೆಚ್ಚಿಸಿದ ಕೀರ್ತಿ ಈತನದ್ದು ಲಾವಣಿಗಳಿಗೆ ವೈವಿಧ್ಯತೆ ತಂದುಕೊಟ್ಟ ಶ್ರೇಯಸ್ಸು ಖಾಜಾಬಾಯಿಗೆ ಸಲ್ಲುತ್ತದೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು.

೩ : ೪. ಸಂಕದ ಬಸಯ್ಯ :

"ತುಂಟ-ತುಂಟರಗಿ ಗಂಟಬಿದ್ದರ ಗರದಿ ಆಗತಾದ ಗಮ್ಮತ್ತಾ" ಎನ್ನುವ ಹಾಸ್ಯ ಲಾವಣಿ ಕೇಳದ ಜಾನಪದರಿಲ್ಲ. ಈ ಲಾವಣಿ ಗೀಗೀ ಮೇಳಗಳಿಗೆ, ಅವುಗಳನ್ನು ಕೇಳುವವರಿಗೆ ತುಂಬ ಚಿರಪರಿಚಿತವಾಗಿದೆ. ಇದನ್ನು ರಚಿಸಿ, ಹಾಡಿದ ಜನಪ್ರಿಯ ಲಾವಣಿಕಾರನೆಂದರೆ ಸಂಕದ ಬಸಯ್ಯ.

ಸಂಕದ ಬಸಯ್ಯ, ತನ್ನದೇ ಆದ ಬಯಲು ಲಾವಣಿಗಳಿಂದ ಹಳ್ಳಿಗರಿಗೆ ಹುಚ್ಚು ಹಿಡಿಸಿದಾತ. "ಕಾಲಲ್ಲಿ ಗೆಜ್ಜೆಕಟ್ಟಿ ಕೈಪರೆಯಿಂದ ತಾಳತಟ್ಟಿ, ರಂಜಿಸಿದ ಸುಮಧುರ ಷಡ್ಜಸ್ವರದ ಲಾವಣಿಕಾರ"[೮] ಹಲಸಂಗಿ ಗೀಗೀ ಮೇಳಗಳ ಪರಂಪರೆಗೆ ಹಾಸ್ಯ ರಸವನ್ನು ಬೆರೆಸಿದ ವಿಶೇಷತೆ ಇವನಿಗಿದೆ. ಈತನ ಮೇಳ ಎಲ್ಲಿಯೇ ಹೋದರೂ ಜನ "ತುಂಟ-ತುಂಟರಗಿ......." ಲಾವಣಿ ಹಾಡಲು ದುಂಬಾಲು ಬೀಳುತ್ತಿದ್ದರಂತೆ. ಹಳ್ಳಿಗರಲ್ಲಿ ಜಿಪುಣತನಕ್ಕೆ ಸ್ಥಾನವಿಲ್ಲ.

ಈ ಲಾವಣಿ ಕೃಪಣತೆಗೆ ಚಾಟಿಯೇಟು ನೀಡುವ ವಿಡಂಬನಾತ್ಮಕ ರಚನೆ. ತನ್ನ ವ್ಯಂಗ್ಯ ಮತ್ತು ಕಟಕಿಯ ಮೂಲಕ ಜನಮನ ರಂಜಿಸುವ ಗುಣ ಹೊಂದಿದೆ. "ಲಾವಣಿಕಾರನಿಲ್ಲಿ ತನ್ನ ಸುತ್ತ-ಮುತ್ತಲಿನ ಸಂಸಾರದ ನಿತ್ಯ ಜೀವನದ ಒಂದು ಸಾಮಾನ್ಯ ಘಟನೆಯನ್ನೇ ಸ್ವಾರಸ್ಯಪೂರ್ಣವಾಗಿ ಹೇಳಿದ್ದಾನೆ. ಇಲ್ಲಿ ಕವಿಯ ಮಾನವ ಸ್ವಭಾವ ನಿರೀಕ್ಷಣೆಯನ್ನು ನಾವು ಮೆಚ್ಚಬೇಕಾಗುತ್ತದೆ"[೫] ಎಂಬ ಪ್ರಶಂಸೆ ಸಹಜವಾಗಿದೆ.

೩ : ೪. ಸಮಾರೋಪ :

ಹಲಸಂಗಿ ಭಾಗದ 'ಗೀಗೀ ಮೇಳ'ಗಳ ಲಾವಣಿಗಳು ಭಾಷೆಯಲ್ಲಿ ಸತ್ವದಲ್ಲಿ ಮೇಲ್ಮೆಯನ್ನು ಪಡೆದಿವೆ. ಇವರು ತೋರುವ ಕಾವ್ಯರಚನಾಕೌಶಲ್ಯ, ಛಂದಸ್ಸಿನ ಮೇಲಿನ ಪ್ರಭುತ್ವ, ಕಲ್ಪನಾಸಾಮರ್ಥ್ಯ, ಆಡುಮಾತಿನ ಸೊಗಡು ಅನುಪಮವಾಗಿವೆ. ಇವರ ಸಂವೇದನಾಕ್ಷೇತ್ರ ಸಣ್ಣದಿರಬಹುದು. ಅನುಭವದ ವಲಯ ಪರಿಮಿತವಾಗಿರಬಹುದು. ಆದರೆ ಶಬ್ದ-ಶಬ್ದಗಳಲ್ಲಿ ಅವರು ತುಂಬುವ ಜೀವ, ಶಬ್ದಗಳ ಜೋಡಣೆಯಲ್ಲಿ ಅವರು ತೋರುವ ನಾದಕೌಶಲ, ಅನುಭವವನ್ನು ಸಾಭಿನಯವಾಗಿ ತೋರುವ ಪ್ರತಿಭೆ ಅಪ್ರತಿಮವಾಗಿವೆ. ಇವರ ಲಾವಣಿಗಳ ಭಾಷೆಯು ಜೀವನದ ಹಲವು ಭಾವಗಳನ್ನು ರಸಮಯ ಸನ್ನಿವೇಶಗಳನ್ನೂ ಹೊರಬಲ್ಲ ಸಾಮರ್ಥ್ಯ ಪಡೆದಿದೆ." ಎಂಬ ಮಾತು ನೈಜವಾಗಿದೆ.

"ಹಲಸಂಗಿ ಭಾಗದಲ್ಲಿ ಅಲ್ಲಲ್ಲಿ ಲಾವಣಿಗಳನ್ನು ಹಾಡುವವರು ಹುಟ್ಟಿಬಂದರೇ ವಿನಾ, ಸಮರ್ಥ ಲಾವಣಿಕಾರರು ಮಾತ್ರ ಹುಟ್ಟಿ ಬರಲಿಲ್ಲ"ವೆಂದು ಖೇದ ವ್ಯಕ್ತಪಡಿಸಿದವರಿದ್ದಾರೆ. ಆದರೆ ಲಾವಣಿ ರಚಿಸುವವರು ಎಷ್ಟು ಮುಖ್ಯವಾಗುತ್ತಾರೋ, ಅದರಷ್ಟೇ ಅದನ್ನು ಸುಶ್ರಾವ್ಯವಾಗಿ ಹಾಡುವವರು ಮುಖ್ಯವಾಗುತ್ತಾರೆ. ರಚನೆಕಾರರಿಗಿರುವಷ್ಟೇ ಗೌರವಾದರಗಳು ಅದನ್ನು ಪ್ರಸ್ತುತ ಪಡಿಸುವ ಗಾಯಕರಿಗೆ, 'ಗೀಗೀ ಮೇಳ'ಗಳಿಗೆ ಸಲ್ಲುತ್ತದೆ, ಎಂಬುದನ್ನು ಮರೆಯಬಾರದು. ಉತ್ತರ ಕರ್ನಾಟಕದಲ್ಲಿ ಹಲಸಂಗಿ ಪರಂಪರೆಯ ಗೀಗೀ ಮೇಳಗಳಿಗೆ ತನ್ನದೆ ಆದ ವಿಶೇಷತೆ ಪ್ರಾಪ್ತವಾಗಿರುವುದು ಗಮನಾರ್ಹವಾಗಿದೆ.

ಅಡಿ ಟಿಪ್ಪಣಿಗಳು :

೧. ಹಲಸಂಗಿ ಭಾಗದ ಲಾವಣಿಕಾರರು, – ಜಾನಪದ ಸಾಹಿತ್ಯ ದರ್ಶನ, (ಸಂಪುಟ : ೫,) ಪುಟ : ೧೭೪

೨. ಡಾ. ವೀರೇಂದ್ರ ಸಿಂಪಿ – ಹಲಸಂಗಿ ಭಾಗದ ಲಾವಣಿಕಾರರು, ಪುಟ : ೧೭೭

೩. ಡಾ. ವೀರೇಂದ್ರ ಸಿಂಪಿ ಜಾನಪದ ಸಾಹಿತ್ಯ ದರ್ಶನ, (ಸಂಪುಟ : ೫) ಪುಟ : ೧೭೭

೪. ಜಾನಪದ ಸಾಹಿತ್ಯ ದರ್ಶನ, (ಸಂಪುಟ : ೫,) ಪುಟ : ೧೮೦

೫. ಕುತೂಹಲಕ್ಕಾಗಿ ನೋಡಿ : 'ಯಾರಿಗೆ ಯಾರು ಗುರು' – ಸಿಂಪಿ ಲಿಂಗಣ್ಣನವರ ಕೃತಿ.

೬. ಹೊಸಗನ್ನಡ ಕಾವ್ಯದ ಎರಡು ಮಾರ್ಗಗಳು, ಜನಪದ ಸತ್ವ ನವೋದಯ ಕಾವ್ಯ, ಪುಟ : ೭೨.

೭. ಜಾನಪದ ಸಾಹಿತ್ಯ ದರ್ಶನ, (ಸಂಪುಟ : ೫,) ಪುಟ : ೧೮೬ – ೧೮೭.

೮. ಹಲಸಂಗಿ ಭಾಗದ ಲಾವಣಿಕಾರರು, ಪುಟ : ೧೮೭.

೯. ಜಾನಪದ ಸಾಹಿತ್ಯ ದರ್ಶನ, (ಸಂಪುಟ : ೫,) ಪುಟ : ೧೭೩.

----- ✽ -----

೪. ಸಾವಳಗಿ ದೇಗಾಂಯಿ ಭಾಗದ ಗೀಗೀ ಮೇಳಗಳು

ಪ್ರವೇಶ :

ಕನ್ನಡದ ಪ್ರಪ್ರಥಮ ಲಕ್ಷಣಗ್ರಂಥ 'ಕವಿರಾಜಮಾರ್ಗ' ಮೂಡಿಬಂದ ಮಾನ್ಯಖೇಡ (ಮಳಖೇಡ) ನಾಡಿನ ಕಲಬುರ್ಗಿ ಪರಿಸರದ ಲಾವಣಿ ಸಂಪ್ರದಾಯವನ್ನು 'ಸಾವಳಗಿ ದೇಗಾಂಯಿ' ಪರಂಪರೆಯೆಂದು ಕರೆಯುವುದು ರೂಢಿಯಾಗಿದೆ.

'ಸಾವಳಗಿ' ಎಂದಾಗ, ಗೋಕಾಕ ಸಾವಳಗಿ, ಜಮಖಂಡಿ (ತುಂಗಳ) ಸಾವಳಗಿ ಗ್ರಾಮಗಳು ಚಿತ್ತಭಿತ್ತಿಯ ಮೇಲೆ ಮೂಡುತ್ತವೆ. ಆದರೆ ಸಾವಳಗಿ ದೇಗಾಂಯಿಯು ಕಲಬುರ್ಗಿ ಪರಿಸರವನ್ನು ಹೈದರಾಬಾದ್ ಕರ್ನಾಟಕದ ಭೌಗೋಳಿಕಕ್ಷೇತ್ರವನ್ನು ಪ್ರತಿನಿಧಿಸುವಂತಹದು. ಇಲ್ಲಿಯ ಗೀಗೀ ಮೇಳಗಳು ತಮ್ಮದೇ ಆದ ವಿಶೇಷತೆಯನ್ನು ಪಡೆದಿರುವುದರಿಂದ ಉತ್ತರ ಕರ್ನಾಟಕದ ಪ್ರಸಿದ್ಧ ಗೀಗೀ ಮೇಳಗಳಲ್ಲಿ ಪ್ರಮುಖ ಸ್ಥಾನ ಗಳಿಸಿವೆ.

ಸಮೃದ್ಧ ಲಾವಣಿಗಳ ರಚನೆಯಿಂದಾಗಿ, ಸಮರ್ಥ ಗೀಗೀ ಮೇಳಗಳು ಹುಟ್ಟಿಕೊಂಡಿವೆ. ಈ ಭಾಗದ ಗೀಗೀ(ಲಾವಣಿ) ಹಾಡಿಕೆಗಳನ್ನು 'ಹಾಡಕ್ಕಿ' ಎಂದು ಕರೆಯುತ್ತಾರೆ. ಹಾಡಿಕೆಯು ಕಾಲಾನುಕ್ರಮದಲ್ಲಿ ಹಾಡಕಿಯಾಗಿ ಮುಂದೆ ಹಾಡ್ಕಿಯಾಗಿ ರೂಪಾಂತರಗೊಂಡು ಕೊನೆಗೊಮ್ಮೆ ಹಾಡಕಿಯಾಗಿ ನೆಲೆನಿಂತು ರೂಢಿಗತವಾಗಿದೆಯೆಂಬುದು ವಿದ್ವಾಂಸರ ಅಭಿಮತವಾಗಿದೆ.

೪ : ೧. ಮಹಮ್ಮದ ಸಾಹೇಬ :

ಇವನು 'ಸಾವಳಗಿ ಮಹಮ್ಮದ ಸಾಹೇಬ'ನೆಂದೇ ಚಿರಪರಿಚಿತನಾಗಿದ್ದಾನೆ. ಕಲಬುರ್ಗಿ ಪಕ್ಕದಲ್ಲಿರುವ ಸಾವಳಗಿ ಗ್ರಾಮದವನೀತ. ಹರದೇಶಿ ಸಂಪ್ರದಾಯದ ಸುಪ್ರಸಿದ್ಧ ಲಾವಣಿಕಾರ. "ಮಹಮ್ಮದಸಾಹೇಬನ ತಂದೆ ಮೋದಿನಸಾಬನೂ ಕವಿ. ಅಜ್ಜನ ತಂದೆ, ಅಜ್ಜನ ಅಜ್ಜ ಹೀಗೆ ಒಂಬತ್ತು ತಲೆಮಾರುಗಳಿಂದಲೂ ಮಹಮ್ಮದ ವಂಶದಲ್ಲಿ ಕಾವ್ಯಸೆಲೆ ಹರಿದುಬಂದ ಸಂಗತಿ ಜನಮಾನಸದಲ್ಲಿ ದಂತಕಥೆಯಾಗಿ ಪ್ರಚಲಿತದಲ್ಲಿದೆ. ಹೀಗೆ ವಂಶವಾಹಿನಿಯಾಗಿ ಹರಿದುಬಂದ ಕಾವ್ಯಪರಂಪರೆ ಮಹಮ್ಮದನಲ್ಲಿ ತನ್ನ ಒಂಬತ್ತನೆಯ ವಯಸ್ಸಿನಿಂದಲೇ ಲಾವಣಿ ರಚನೆಗಾರಂಭಿಸಿದ್ದು ಈತನ ಅಭಿಜಾತ ಪ್ರತಿಭೆಯ ಹೆಗ್ಗುರುತಾಗಿದೆ. ಎರಡು ಸಾವಿರಕ್ಕೂ ಮಿಕ್ಕಿದ ಲಾವಣಿಗಳನ್ನೀತ ರಚಿಸಿದ್ದಾನೆ. ಇವನ ಬಹಳಷ್ಟು ಹಾಡುಗಳು ಕಲಬುರ್ಗಿ ಸ್ನಾತಕೋತ್ತರ ಕೇಂದ್ರದ ಕನ್ನಡ ವಿಭಾಗದಿಂದ ಸಂಗ್ರಹವಾಗಿವೆ."[೧]

ಈತ ಕಲಿತದ್ದು ತೀರ ಅತ್ಯಲ್ಪ. ಅದು 'ಮೋಡಿ' ಮಾತ್ರ. ಲಾವಣಿಕಾರನಾದ ಮಹಮ್ಮದ ಮೋಹರಮ್ ಪದಗಳನ್ನು, ಗುಲಬಕಾವಲಿ, ಬಸವೇಶ್ವರ, ಚಂದ್ರಹಾಸ ಮುಂತಾದ ಬಯಲಾಟಗಳನ್ನು ರಚಿಸಿದ್ದಾನೆ. 'ಹಿರಿ ಸಾವಳಗಿ ಸಿದ್ಧನಮೂರ್ತಿ ಹರದಾಸ' ಮತ್ತು 'ಸಾವಳಗಿ ಶಿವಲಿಂಗೇಶ್ವರ' ಅಂಕಿತದಲ್ಲಿ ಮಹಮ್ಮದನ ರಚನೆಗಳು ಲಭಿಸುತ್ತವೆ.

ಮಹಮ್ಮದನ ಕಂಠ ಸಾಧಾರಣವಾಗಿದ್ದರೂ, ಕಂಚಿನ ಕಂಠದ ಶಿಷ್ಯರನ್ನು ತಯಾರಿಸಿ ಅವರಿಗೆ ರಮ್ಯವಾದ ಹಾಡುವ ಕಲೆ, ಸೂಕ್ತವಾದ ದಾಟಿ, ಗೀಗೀಯ ಗತ್ತು ಗಮ್ಮತ್ತುಗಳನ್ನು ಕಲಿಸಿ, ಅದ್ಭುತವಾದ ಗೀಗೀ ಮೇಳವನ್ನು ಸಂಘಟಿಸಿದ್ದನು. ಈತನ ಗೀಗೀಮೇಳ ಹೈದರಾಬಾದ ಕರ್ನಾಟಕದ ಪರಿಸರದಲ್ಲಿ ತುಂಬ ಪ್ರಚಾರ ಪಡೆದು, ಅನೇಕ ಮೇಳಗಳು ಹುಟ್ಟಲು ಸ್ಫೂರ್ತಿ ನೀಡಿತ್ತು.

೪ : ೨. ಮಹಾಲಿಂಗ :

ದೇಗಾಂವ ಗ್ರಾಮದವನೀತ. ಆಳಂದ ತಾಲ್ಲೂಕಿನ ದೇಗಾಂವದ ಅಚಲೇರಿ ಮನೆತನದಲ್ಲಿ ಮೂಡಿಬಂದ ಪ್ರತಿಭಾ ಸಂಪನ್ನ ಗೀಗೀಕಾರ. ಕೃಷಿ ಕುಟುಂಬದ ಪರಿಸರದಲ್ಲಿ ಬೆಳೆದದ್ದರಿಂದ ಅಕ್ಷರಾಭ್ಯಾಸ ಮಾಡಿದ್ದು ಕಡಿಮೆ. ವೀರಶೈವ ಧಾರ್ಮಿಕ ಹಿನ್ನೆಲೆಯುಳ್ಳ ಮಹಾಲಿಂಗ, ಸರಳ ಸಾತ್ವಿಕ ಮತ್ತು ತಾತ್ವಿಕ ವಿಚಾರಗಳನ್ನು ತನ್ನ ಲಾವಣಿಯಲ್ಲಿ ಪೋಷಿಸಿದಾತ. ಒಂದು ಸಾವಿರಕ್ಕಿಂತಲೂ ಹೆಚ್ಚಿನ ಗೀಗೀ ಪದಗಳನ್ನು ಬರೆದಿದ್ದಾನೆ.

ಗೀಗೀ ಮೇಳದ ಸಂಪರ್ಕ ಬಾಲ್ಯದಲ್ಲಿಯೇ ಲಭಿಸಿದ್ದರಿಂದ, ಅದರ ತಿರುಳು ಕರಗತವಾಗಿತ್ತು. ಜನಪದ ದಾಟಿ ಹಾಡುವ ಗತ್ತು, ಕೋಮಲ ಕಂಠ, ಜನತೆಯೊಂದಿಗೆ ಅನುಸಂಧಾನ ಮುಂತಾದವುಗಳಿಂದಾಗಿ ಆರಂಭದಲ್ಲಿಯೇ ಜನಪ್ರಿಯತೆಯ ಉತ್ತುಂಗ ಶಿಖರ ತಲುಪಿದನಂತೆ. ಈತನ ಮೇಳದಲ್ಲಿ 'ಮಹಾರುದ್ರ'ನೆಂಬಾತ ಮಹಾಲಿಂಗನಷ್ಟೇ ಕೋಮಲ ಕಂಠ ಪಡೆದ ಗಾಯಕನಿದ್ದನಂತೆ. ಇಬ್ಬರೂ ಸೇರಿ ಹಾಡತೊಡಗಿದರೆ, ಜನಸಮೂಹ ಸಮ್ಮೋಹಿನಿ ಶಕ್ತಿಗೆ ಒಳಗಾಗಿ ಇಹ–ಪರವನ್ನು ಮರೆಯುತ್ತಿತ್ತಂತೆ !

ಈತ ರಚಿಸಿದ ಲಾವಣಿಗೆ 'ಮಹಾಲಿಂಗ–ಮಹಾರುದ್ರ' ಅಂಕಿತವಿರಿಸಿಕೊಂಡಿರುವುದು ಅವರಿಬ್ಬರ ಆಪ್ತತೆಗೆ, ನಿಕಟ ಸ್ನೇಹಕ್ಕೆ ಸಾಕ್ಷಿಯಾಗಿದೆ. ಇವರಿಬ್ಬರೂ ಪರಸ್ಪರ ರಕ್ತಸಂಬಂಧಿಗಳಾಗಿದ್ದರೂ ; ಅದಕ್ಕಿಂತಲೂ ಹೆಚ್ಚಾಗಿ 'ಗೀಗೀ ಮೇಳ' ಅವರನ್ನು ಗಾಢವಾಗಿ ಬೆಸೆದ ಸಂಗತಿಯಾಗಿತ್ತು. "ಮಹಾಲಿಂಗನು ಅನೇಕ ದಪ್ಪಿನಾಟಗಳನ್ನು ಬರೆದಿದ್ದಾನೆ. ಅನುಸೂಯಾ, ಗೋರಖಮಚ್ಛೇಂದ್ರ, ಶಿವಮ್ಮ ಮೊದಲಾದ ಸಣ್ಣಾಟಗಳು ಪ್ರಸಿದ್ಧವಾಗಿವೆ."[೨] ಇದು ಆತನ ಬಹುಶ್ರುತತೆಗೆ ಸಾಕ್ಷಿಯಾಗಿದೆ.

ಕನ್ನಡ, ಹಿಂದಿ, ಉರ್ದು, ಮರಾಠಿ ಭಾಷೆಗಳಲ್ಲಿ ಲೀಲಾಜಾಲವಾಗಿ ವ್ಯವಹರಿಸಬಲ್ಲ ನಿಪುಣ. ವಯೋವೃದ್ಧನಾದರೂ ಲಾವಣಿ ಕಟ್ಟುತ್ತಾ, ಗೀಗೀ ಮೇಳಗಳಲ್ಲಿ ಸಂಭ್ರಮದಿಂದ ಹಾಡುತ್ತಾ, ಜನ-ಮನ ತಣಿಸಿದಾತ. ಹಜರತ್ ಈತನ ಅಂಕಿತವಾಗಿದೆ. "ಲಾವಣಿ ಹಾಡುಗಳೊಂದಿಗೆ ಮೊಹರಮ್ ಹಾಡು, ಹಂತೀಹಾಡು, ಡೊಳ್ಳಿನ ಹಾಡು ಹೀಗೆ ಜನಪದದ ಅನೇಕ ವೈವಿಧ್ಯಮಯವಾದ ಕಾವ್ಯವನ್ನು ಸೃಜಿಸಿ 'ಕವಿಗಾರ' ಎಂದು ಹೆಸರು ಪಡೆದಿದ್ದಾನೆ."[೩] ಇದೂ ಅಲ್ಲದೆ 'ಸಜೀವಾ ಸತ್ವಪರೀಕ್ಷಾ' ಎಂಬ ದಪ್ಪಿನಾಟವನ್ನು ಕೂಡ ಬರೆದಿದ್ದಾನೆಂದು ತಿಳಿದು ಬರುತ್ತದೆ.

೪ : ೩. ಆನಂದರಾಯ :

ಮಹಾಲಿಂಗಪ್ಪ ಮತ್ತು ಗುಂಡಪ್ಪನ ಸಮಕಾಲೀನ ಲಾವಣಿಕಾರ. ಈತನೂ 'ದೇಗಾಂದ'ವನೇ. 'ಕೌಲಗಿ' ಮನೆತನದ ಕೃಷಿ ಕುಟುಂಬದಿಂದ ಬಂದವನೀತ. ಆನಂದರಾಯ ವೀರಶೈವನಾದುದರಿಂದ ಸಾತ್ವಿಕ ಸಂಪ್ರದಾಯದ ಲಾವಣಿ ಪರಂಪರೆಯನ್ನು ಪೋಷಿಸಿ, ಪ್ರೋತ್ಸಾಹಿಸಿದಾತ. ಗೀಗೀ ಹಾಡುಗಳ ಕೂಡ, ಮೊಹರಮ್ ಪದಗಳನ್ನು ಬರೆದಿದ್ದಾನೆ. ಈತನ ರಚನೆಯನ್ನು ಸಂಗ್ರಹಿಸುವ ಸಂಪಾದಿಸುವ ಹಾಗೂ ಪ್ರಕಟಿಸುವ ಕಾರ್ಯ ಆಗಬೇಕಿದೆ.

೪ : ೪. ನಾಟೀಕಾರ ಬಸಪ್ಪ :

ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಜಾವಳಿಯ ಸಮೀಪದ 'ಧಂಗಾಪೂರ' ಗ್ರಾಮದ ಲಾವಣಿಕಾರನೀತ. ಮತದಿಂದ ಕಬ್ಬಲಿಗನಾದರೂ ಶಾಸ್ತ್ರ-ಪುರಾಣಗಳನ್ನು ಅರಿತ, ಪ್ರಭಾವಶಾಲಿಯಾದ ವ್ಯಕ್ತಿತ್ವ ರೂಪಿಸಿಕೊಂಡಿದ್ದನು. ಗೀಗೀ ಪದಗಳು, ಮೊಹರಮ್ ಪದಗಳು, ಮತ್ತು ದೊಡ್ಡಾಟ ಮುಂತಾದವುಗಳನ್ನೀತ ರಚಿಸಿದ್ದಾನೆ.

೪ : ೫. ನಾಟೀಕಾರ ಶಿವಶಿವರಣಪ್ಪ :

ನಾಟೀಕಾರ ಬಸಪ್ಪ ಲಾವಣೀಕಾರನ ಮಗನೀತ. ತಂದೆಯೇ ಗುರು, ಮಾರ್ಗದರ್ಶಕ, ಪೋಷಕ, ಹಾಗೂ ಪ್ರೇರಕ. ಈತ ನೂರಾರು ಲಾವಣಿ ರಚಿಸಿರುವುದಲ್ಲದೆ ಹಂತೀ ಹಾಡು, ಮೊಹರಮ್ ಪದಗಳನ್ನು ಕಟ್ಟಿದ್ದಾನೆ. ಹಾಡುವ ಕಲೆ ಈತನಿಗೆ ಸಿದ್ಧಿಸಿತು. ಗೀಗೀ ಮೇಳ ಕಟ್ಟಿಕೊಂಡು ಊರೂರಿಗೆ ಲಾವಣಿ ಹಾಡುತ್ತಿದ್ದ. ಇಂದಿಗೂ ಈತನ ಹಾಡುಗಳನ್ನು ನೆನಪಿಸಿಕೊಂಡು ಹಿರಿಯರು ಮೈಮರೆತು ಮಾತನಾಡುತ್ತಾರೆ. ಮಹಾಲಿಂಗನಿಗೆ ಶಿಷ್ಯರ ಬಳಗ ಅಪಾರವಾಗಿತ್ತು. ಅದರಲ್ಲಿ ಗುಂಡಪ್ಪ ಮತ್ತು ಹಜರತ್ ಪ್ರಮುಖರು.

೪ : ೬. ಗುಂಡಪ್ಪ :

ಗುಂಡಪ್ಪ 'ದೇಗಾಂವ'ದ ಹೆಬ್ಬಾಳ ಮನೆತನದವನು. ಕಲಿತದ್ದು ಅಂದಿನ ನಾಲ್ಕನೆಯ ತರಗತಿ ಮಾತ್ರ. ಅದೂ ಗಾಂವಠಿ ಶಾಲೆ. ಕಿರಾಣಿ ಅಂಗಡಿಯನ್ನಿಟ್ಟುಕೊಂಡ ಕಿರುಕುಳ

ವ್ಯಾಪಾರಿ. ಸಾಹಿತ್ಯದಲ್ಲಿ ಅಪಾರ ಆಸಕ್ತಿ. ಮೋಡಿ, ಮರಾಠಿ, ಉರ್ದುಭಾಷೆಗಳನ್ನು ಸಂಪರ್ಕದಿಂದ ಕಲಿತುಕೊಂಡನು.

ಸ್ವಧರ್ಮವಾದ ವೀರಶೈವದ ಷಟಸ್ಥಲ-ಅಷ್ಟಾವರಣ, ಪಂಚಾಚಾರ ಮುಂತಾದವುಗಳಲ್ಲಿ ಅಪಾರ ಶ್ರದ್ಧೆಯಿರಿಸಿದಾತ. ಆಳವಾದ ಅಧ್ಯಯನದಿಂದ ಈ ಶಾಸ್ತ್ರ ವಿಷಯಗಳನ್ನು ಅರಗಿಸಿಕೊಂಡಾತ. ತನ್ನ ಗುರು ಮಹಾಲಿಂಗನಲ್ಲಿ ಅಪಾರ ಗೌರವ ಅಚಲ ನಂಬಿಕೆಯನ್ನಿರಿಸಿದ ಸಾಧಕಜೀವಿ.

ಗುಂಡಪ್ಪ ಒಳ್ಳೆಯ ಹಾಡುಗಾರ. ಗುಂಡಪ್ಪನ ಅಣ್ಣ ಭದ್ರಪ್ಪ, ಇವರಿಬ್ಬರೂ ಕೂಡಿಯೇ ಗೀಗೀ ಮೇಳ ಸಂಘಟಿಸಿ, ಕಾರ್ಯಕ್ರಮ ನಡೆಸಿಕೊಡುತ್ತಿದ್ದರು. ಕೆಲ ಹಾಡುಗಳಲ್ಲಿ ಗುಂಡಪ್ಪ ಎಂದೂ, ಮತ್ತೆ ಹಲವು ಹಾಡುಗಳಲ್ಲಿ ಗುಂಡು-ಭದ್ರವೆಂತಲೂ ಅಂಕಿತವಿರುವುದನ್ನು ಕಾಣುತ್ತೇವೆ. ಆರಂಭದಲ್ಲಿ ಗುಂಡಪ್ಪ ಎಂದಿದ್ದು ಗೀಗೀ ಮೇಳ ಹುಟ್ಟುಹಾಕಿ, ಊರೂರು ಅಲೆದಾಡುತ್ತ ಮೇಳ ತುಂಬ ಖ್ಯಾತಿ ಪಡೆದ ಮೇಲೆ ಗುಂಡು-ಭದ್ರವೆಂಬ ಅಂಕಿತವನ್ನು ರೂಢಿಸಿಕೊಂಡಿರಬಹುದು.

ಇವರದೂ ಕೂಡ ಹರದೇಶಿ ಸಂಪ್ರದಾಯವಾಗಿತ್ತು. "ತತ್ವದಲ್ಲಿ, ಶಾಸ್ತ್ರದಲ್ಲಿ, ಪ್ರಾಸದಲ್ಲಿ, ಏರು ಇಳುವುಗಳ ಹೊಂದಾಣಿಕೆಯಲ್ಲಿ, ಪದಗಳ ಬೆಡಗಿನಲ್ಲಿ, ವಿಷಯ ನಿರೂಪಣೆಯಲ್ಲಿ ಈತನ ಹಾಡುಗಳು ತಮ್ಮದೇ ಆದ ವೈಶಿಷ್ಟ್ಯ ಮೆರೆದಿವೆ"[೪] ಗುಂಡಪ್ಪ ಲಾವಣಿಯ ಜೊತೆಗೆ ಭಜನ್ನಿಪದ, ಮೊಹರಮ್ ಹಾಡುಗಳನ್ನು ಬರೆದಿದ್ದಾನೆ. ಈತನ ಅಮೃತರಾಜ ಸಣ್ಣಾಟವು ದೇಗಾಂವ ಭಾಗದ ತುಂಬ ಜನಪ್ರಿಯ ಬಯಲಾಟವಾಗಿದೆ.

೪ : ೭. ಹಜರತ್ ಸಾಹೇಬ :

ಮಹಾಲಿಂಗನ ಶಿಷ್ಯನೀತ. ಈತನೂ ಗುಂಡಪ್ಪನಂತೆ ದೇಗಾಂವ ಗ್ರಾಮದವನು. ಮುಜಾವರ ಮನೆತನಕ್ಕೆ ಸೇರಿದ ವ್ಯಕ್ತಿ. ಮತದಿಂದ ಮುಸ್ಲಿಮನಾದರೂ ಶಿವಶರಣರಿಂದ ಪ್ರಭಾವಿತನಾಗಿ ವಿರಶೈವಧರ್ಮ, ಸಾಹಿತ್ಯ, ಸಂಸ್ಕೃತಿಗಳನ್ನು ಆರಾಧಿಸಿದಾತ. ಶ್ರದ್ಧೆಯಿಂದ ಅಧ್ಯಯನಿಸಿ ಅವುಗಳನ್ನು ಆತ್ಮಸಾತ್ ಮಾಡಿಕೊಂಡ ವ್ಯಕ್ತಿ. ಹಜರತ ಕಲಿತದ್ದು ಮರಾಠಿ ಮೋಡಿಯಾದರೂ, ಕನ್ನಡ, ಮರಾಠಿ, ಹಿಂದಿ, ಉರ್ದು ಭಾಷೆಗಳಲ್ಲಿ ಲೀಲಾಜಾಲವಾಗಿ ವ್ಯವಹರಿಸಬಲ್ಲ ನಿಪುಣತೆ ಪಡೆದಿದ್ದ. ಎಪ್ಪತ್ತೈದರ ವೃದ್ಧಾಪ್ಯದಲ್ಲಿಯೂ ಲಾವಣಿ ರಚಿಸುತ್ತ, ಗೀಗೀ ಮೇಳಗಳಲ್ಲಿ ಸಂಭ್ರಮದಿಂದ ಹಾಡುತ್ತ, ಶಿಷ್ಯರಿಂದ ಹಾಡಿಸುತ್ತ ಜನಮನ ಸೂರೆಗೊಂಡ ಲಾವಣಿಕಾರ. ಹಜರತ್ ಗೀಗೀ ಪದಗಳೊಂದಿಗೆ ಮೋಹರಮ್ ಹಾಡುಗಳು, ಹಂತಿ ಹಾಡು, ಡೊಳ್ಳಿನ ಪದಗಳನ್ನು ರಚಿಸಿದ್ದಾನೆ. 'ಸಜೀವ ಸತ್ವಪರೀಕ್ಷಾ' ಡಪ್ಪಿನಾಟವನ್ನೂ ಬರೆದಿದ್ದಾನೆ. ಇವೆಲ್ಲವೂ ಹಜರತ್ ಸಾಹೇಬನ ಬಹುಮುಖ ವ್ಯಕ್ತಿತ್ವವನ್ನು ಸೊಗಸಾಗಿ ಅನಾವರಣಗೊಳಿಸುತ್ತವೆ.

೪ : ೮. ಕೃಷ್ಣಾಜಿ ರಾಮಚಂದ್ರ ಕುಲಕರ್ಣಿ :

ಕಲಬುರ್ಗಿ ಜಿಲ್ಲೆಯ ಆಳಂದ ತಾಲ್ಲೂಕಿನ ಭಟ್ಟರಕೀ ಗ್ರಾಮದ ಲಾವಣಿಕಾರ. ಹೆಸರೆ ಸೂಚಿಸುವಂತೆ ಮತದಿಂದ ಬ್ರಾಹ್ಮಣ. ಕಲಿತದ್ದು ನಾಲ್ಕನೆಯ ತರಗತಿಯವರೆಗೆ ಮೋಡಿ ಮತ್ತು ಮರಾಠಿ ಭಾಷೆಯನ್ನು. ಈತ ಹಲವಾರು ಲಾವಣಿಗಳನ್ನು ರಚಿಸಿದ್ದಾನೆ. ಭಜನಾಪದ, ಮೊಹರಂ ಪದಗಳನ್ನು ಬರೆದಿರುವುದು ವಿಶೇಷವೆನಿಸುತ್ತದೆ.

೪ : ೯ ಶಂಕರಲಿಂಗ :

ಶಂಕರಲಿಂಗ ಕಲಬುರ್ಗಿ ಜಿಲ್ಲೆಯ ಅಷ್ಟಗಿ ಹತ್ತಿರದ ಜಂಬಗಿಯವನು. ದಲಿತ ಲೋಕದಿಂದ ಮೂಡಿಬಂದಿರುವ ಲಾವಣಿಕಾರ. ವೀರಶೈವಧರ್ಮದ ಶಾಸ್ತ್ರ-ಪುರಾಣ ತಿಳಿದುಕೊಂಡವನು. ಶಿವಶರಣ ಕುರಿತಾಗಿ ಲಾವಣಿ ರಚಿಸಿ, ಭಾವಪೂರ್ಣವಾಗಿ ಹಾಡುವ ಮೋಡಿಕಾರ. ಲಾವಣಿ ಮೇಳಕಟ್ಟೆಯ ಮೇಲೆ ನಿಂತು ಹಾಡುವದು ವಾಡಿಕೆ. ಆದರೆ ಈತ ದಲಿತ ಲೋಕದಿಂದ ಬಂದ ಕಾರಣದಿಂದಾಗಿ ಅದಕ್ಕೆ ಅವಕಾಶ ನೀಡಿರಲಿಲ್ಲ. ಹೀಗಾಗಿ ನೆಲದ ಮೇಲೆ ನಿಂತು ಹಾಡುವ ಅನಿವಾರ್ಯತೆ ಈತನಿಗಿತ್ತು. ಕಟ್ಟಿಯ ಕೆಳಗೆ ನಿಂತುಕೊಂಡೇ ಹತ್ತು-ಹಲವು ವರುಷ ಗೀಗೀ ಪದಗಳನ್ನು ಹಾಡಿ, ಜನ-ಮನ, ತಣಿಸಿದ. ಆದರೆ ತನ್ನ ಪ್ರತಿಭೆ, ಹಾಡಿನ ಮೋಡಿಗೆ ಮನ್ನಣೆ ನೀಡದೇ, ಕೆಳಸ್ತರದಲ್ಲಿ ಜನಿಸಿದ ನಿಮಿತ್ಯವಾಗಿ ಗೌರವಿಸದೆ, ಅಸಡ್ಡೆಯಾಗಿ ಕಾಣುತ್ತಿರುವುದಕ್ಕಾಗಿ ಅಪಾರ ಯಾತನೆಯನ್ನು ಅನುಭವಿಸಿದ; ಮನನೊಂದು ಮುಂದೆ ಹಾಡುವುದನ್ನೇ ಬಿಟ್ಟು, ಕಾವಿಧರಿಸಿ ಬೈರಾಗಿಯಾಗಿ ಹೋದನಂತೆ.

ಸಮಾಜದ ಅಸಮಾನತೆಗೆ ಹಿಡಿದ ಕನ್ನಡಿಯಿದು. ಪಟ್ಟಭದ್ರ ಹಿತಾಸಕ್ತಿಗಳ ಕಪಿಮುಷ್ಟಿಯಲ್ಲಿ, ಜಾನಪದದ ಅಪ್ಪಟ ಸಂಪತ್ತು, ಅಸಾಮಾನ್ಯ ಪ್ರತಿಭೆ, ಅದ್ಭುತ ಗಾಯಕ ನೊಂದು-ಬೆಂದು ಹೋದದ್ದು ವಿಷಾದನೀಯ ಸಂಗತಿಯಾಗಿದೆ.

೪ : ೧೦ ಮೀರಾಸಾಹೇಬ :

ಕಲಬುರ್ಗಿ ಸಮೀಪದ 'ಮಹಾಗಾಂವ'ದವನು. 'ಮಹಾಗಾಂವ ಮೀರಾಸಾಹೇಬ'ನೆಂದು ಚಿರಪರಿಚಿತನಾಗಿದ್ದಾನೆ. ಕಮಾಲಸಾಬ ಮತ್ತು ಹುಸೇನಬಿ ಈತನ ತಂದೆ-ತಾಯಂದಿರು. ಐದನೇ ತರಗತಿಯವರೆಗೆ ಓದಿದಾತ. ಹಲವಾರು ವೇಷಧರಿಸಿ ಬಹುರೂಪಿಯಾಗಿ ಜಾನಪದ ಕಲೆಗಳನ್ನು ಮೈಗೂಡಿಸಿಕೊಂಡಿದ್ದ ದೇಶೀಯ ತಾಜಾ ಪ್ರತಿಭಾನ್ವಿತ ಕಲಾವಿದ.

ತನ್ನ ಲಾವಣಿಗಳಲ್ಲಿ ನೀಲೂರು ದಸ್ತಗೀರ, ಮತ್ತು ಶಿವಶರಣೆ ಮಹಾದೇವಿಯಕ್ಕನನ್ನು ಗೌರವಾದರಗಳಿಂದ ಕಂಡು ಕೊಂಡಾಡಿದ್ದಾನೆ. 'ಪಂಚಾಕ್ಷರಿ' ಹಾಗೂ 'ಮಹಾಗಾಂವ ಮೀರಾ' ಅಂಕಿತದಲ್ಲಿ ಈತನ ರಚನೆಗಳು ಲಭಿಸುತ್ತವೆ.

ಈತನದು 'ನಾಗೇಶಿ' ಸಂಪ್ರದಾಯ. ಇಲ್ಲಿಯವರೆಗೆ ಹರದೇಶಿಯವರು ವಿಪುಲವಾಗಿ ದೊರೆಯುತ್ತಿದ್ದು, ನಾಗೇಶಿಯವರು ವಿರಳವಾಗಿದ್ದರು. ಸಾವಳಗಿ-ದೇಗಾಂಯಿ ಪರಂಪರೆಗೆ, ತನ್ನ ಲಾವಣಿಗಳಿಂದ ಹಾಗೂ ತನ್ನ ಗೀಗೀ ಮೇಳಗಳಿಂದ ಮೀರಾಸಾಹೇಬ ಒಂದು ಅರ್ಥಪೂರ್ಣತೆಯನ್ನು ತಂದಿತ್ತು, ಅವಿಸ್ಮರಣೀಯ ವ್ಯಕ್ತಿಯಾಗಿದ್ದಾನೆ.

೪ : ೧೧. ಅಂಬಾರಾಯ :

ಅಂಬಾರಾಯ ದೇಗಾಂವದ 'ಕೂಡ್ಲಹಂಗರಗಿ' ಎಂಬ ಮನೆತನದವನು. ಶಾಲೆ ಕಲಿಯದಿದ್ದರೂ ವಿಶ್ವವೇ ಈತನಿಗೊಂದು ವಿಶ್ವವಿದ್ಯಾಲಯವಾಗಿ ಪರಿಣಮಿಸಿತು. ಪರಿಸರದಿಂದ ಪ್ರಭಾವಿತನಾಗಿ ಹಾಡು ಬರೆಯಲು ಕಲಿತವನೀತ. ಹಾಡಿನ ತಾಳ-ಲಯ-ಗತ್ತುಗಳನ್ನು ಹಂತ-ಹಂತವಾಗಿ ರೂಢಿಸಿಕೊಂಡು, ಗೀಗೀ ಹಾಡುಗಾರನಾಗಿ ಹೆಸರು ಮಾಡಿದ.

ಹುಚ್ಚ ಅಂಬಾರಾಯ, ಕೂಡು ಅಂಬಾರಾಯ ಈತನ ಗೀಗೀ ಪದಗಳ ಅಂಕಿತವಾಗಿದೆ. ಹರದೇಶಿ ಲಾವಣಿಗಳ ಕೂಡ ಮೊಹರಮ್ ಹಾಡು, ಭಜನೆಗಳನ್ನು ಬರೆದಿದ್ದಾನೆ.

೪ : ೧೨. ಭವಾನಿ-ಚವ್ಹಾಣ :

ಕಲಬುರ್ಗಿ ಶರಣನಗರದ ಲಾವಣಿಕಾರನೀತ. ಗೊಂದಲಿಗರ ಸಮಾಜದಿಂದ ಮೂಡಿ ಬಂದವನು. ಗೊಂದಲಿಗರ ಕಥೆಗಳನ್ನು ರಂಜಿಸುವಂತೆ ಹೇಳುವ ಹಾಡುಗಾರನೀತ. ಶಂಕರಲಿಂಗನ ಶಿಷ್ಯ.

ಆರಂಭದಲ್ಲಿ ಗುರುವಿನ ಲಾವಣಿಗಳನ್ನೇ ಹಾಡುತ್ತಿದ್ದ. ಮುಂದೆ ಕಾಲ-ಪರಿಸರಗಳಿಗೆ ಸ್ಪಂದಿಸುತ್ತ ಸ್ವಂತ ಲಾವಣಿ ರಚಿಸುತ್ತ, ಲಾವಣಿಕಾರನಾಗಿ ರೂಪುಗೊಂಡನು. ಕೇಂದ್ರಸರಕಾರದ ಕ್ಷೇತ್ರ ಪ್ರಚಾರ ಇಲಾಖೆಯಲ್ಲಿ ಹಾಡುಗಾರಿಕೆಯನ್ನು ಬೋಧಿಸುವ ಕಲಾವಿದನಾಗಿ ಕಾರ್ಯ ನಿರ್ವಹಿಸುತ್ತ, ನೂರಾರು ಲಾವಣಿಗಳನ್ನು ಸೃಷ್ಟಿಸಿದ್ದಾನೆ. ಗೀಗೀ ಮೇಳ ಹುಟ್ಟುಹಾಕಿ ಸ್ಮರಣೀಯ ಕಾರ್ಯಕ್ರಮ ನೀಡಿದ್ದಾನೆ.

ಸಮಕಾಲೀನ ಆಗು-ಹೋಗುಗಳಿಗೆ ಸ್ಪಂದಿಸುತ್ತ, ಅವುಗಳಿಗೆ ತಕ್ಕಂತೆ ಲಾವಣಿ ರಚಿಸುತ್ತ, ಮೇಳಗಳಲ್ಲಿ ಹಾಡಿರುವುದು ಈತನ ವಿಶೇಷತೆಯಾಗಿದೆ.

೪ : ೧೩. ಅಂಬಾದಾಸ :

ಕಲಬುರ್ಗಿಯ ಒಕ್ಕಲಗೇರಿಯ ಲಾವಣಿಕಾರನೀತ. ಕ್ಷತ್ರಿಯ ಸಮಾಜಕ್ಕೆ ಸೇರಿದ ವ್ಯಕ್ತಿ. ಕಲಿತದ್ದು ಕೇವಲ ಒಂದನೆಯ ತರಗತಿ ಮಾತ್ರ. ಆದರೂ ಪರಿಶ್ರಮದಿಂದ ಆರೇಳು ಭಾಷೆ ಅರಿತುಕೊಂಡು, ಆರೇಳು ಭಾಷೆಗಳಲ್ಲಿ ಸುಶ್ರಾವ್ಯವಾಗಿ ಹಾಡುಹೇಳುವ ಮೋಡಿಗಾರನೀತ.

ಹೈದರಾಬಾದಿನ ದೊರೆ, 'ಉಸ್ಮಾನಪಾಶಾ'ನ ತಂದೆ, 'ಮಹಿಬೂಬ ಧವಲಾ' ಅಂಬಾದಾಸನಿಗೆ 'ಕಲಿಗೆ' ಬಿರುದು ನೀಡಿ ಗೌರವಿಸಿರುವುದು, ನವಿಲುಪಕ್ಷಿಯ ಬಾಯಿಯಿಂದ ರತ್ನ ಸುರಿಯುವ ಸುಂದರ ಪ್ರತಿಮೆಯನ್ನು ಕಾಣಿಕೆಯಾಗಿ ನೀಡಿ ಸನ್ಮಾನಿಸಿದ ಸಂಗತಿ ಇತಿಹಾಸದಲ್ಲಿ ದಾಖಲುಗೊಂಡಿದೆ.[೫] ಈ ಸಂಗತಿ "ಕವಿಯ ಘನತೆಯನ್ನು ಎತ್ತಿ ತೋರಿಸುತ್ತದೆ. ಕಾಣಿಕೆಯಾಗಿ ಕೊಟ್ಟ ನವಿಲು ಮೂರ್ತಿಯನ್ನು ಪ್ರತಿ ವರ್ಷ ಬಂದೇನವಾಜ ಜಾತ್ರೆಯಲ್ಲಿ ಗಂಧದ ದಿನ ಮೆರೆಸುವ ರೂಢಿ ಇಂದಿಗೂ ನಡೆದು ಬಂದಿದೆ."[೬] ಎಂಬ 'ಶಿವಶರಣ ಜಾವಳಿ' ಯವರ ಮಾತುಗಳು ಗಮನಾರ್ಹವಾಗಿವೆ.

೪ : ೧೪. ವಿಠ್ಠಲ ಅಂಬಾದಾಸ :

ಸುಪ್ರಸಿದ್ಧ ಲಾವಣಿಕಾರ ಅಂಬಾದಾಸನ ಮಗನೀತ. "ಇವನ ಮನೆತನಕ್ಕೆ ಜಿತೂರಿ ಉರ್ಫ್ ಶಾಹೀರ್ ಎಂದು ಹೆಸರು ಬರುವುದಕ್ಕೆ ಏಳೆಂಟು ತಲೆಮಾರುಗಳಿಂದ ದೈವದತ್ತವಾಗಿ ಹಾಡುಗಾರಿಕೆ ಕಲೆ ಬಂದುದೇ ಕಾರಣವಂತೆ"[೭]

ಆಶುಕವಿಯಾದ ವಿಠ್ಠಲ ೧೯೪೭ರವರೆಗೆ ಕಲಬುರ್ಗಿಯಲ್ಲಿ ನೆಲೆಸಿದ್ದು, ತದನಂತರ ಜೀವನ ನಿರ್ವಹಣೆಗಾಗಿ ಸೊಲ್ಲಾಪೂರ ಶಹರ ಸೇರಿದನಂತೆ.

ನಾಗೇಶಿ ಸಂಪ್ರದಾಯದ ಸುಪ್ರಸಿದ್ಧ ಗೀಗೀಮೇಳ ಕಟ್ಟಿ, ಪ್ರತಿವರುಷ ಕಲಬುರ್ಗಿಯ ಶರಣಬಸವೇಶ್ವರ ಜಾತ್ರೆ ಮತ್ತು ಬಂದೇನವಾಜ್ ಉರುಷಿಗೆ ತಪ್ಪದೇ ಬಂದು ಹಾಡುತ್ತಿದ್ದನಂತೆ. ಬಂದೇನವಾಜ ಉರುಷಿನಲ್ಲಿ ಶಾಹರೀಪದ (ಉರ್ದು ಭಾಷೆಯಲ್ಲಿ) ಹೇಳಿದರೆ; ಶರಣ ಬಸವೇಶ್ವರ ಜಾತ್ರೆಯಲ್ಲಿ ನಾಗೇಶಿ ಸಂಪ್ರದಾಯದ ಗೀಗೀ ಪದಗಳನ್ನು (ಕನ್ನಡದಲ್ಲಿ) ಹೇಳುತ್ತಿದ್ದನಂತೆ. ಜಾತ್ರೆಯಲ್ಲಿ ಜನ ಅಪಾರ ಸಂಖ್ಯೆಯಲ್ಲಿ ಸೇರುತ್ತಿದ್ದು ಅಂಬಾದಾಸನ ಮೇಳದ ಹಾಡುಗಳನ್ನು ಕೇಳಿ ಆನಂದಿಸುತ್ತಿದ್ದರಂತೆ. 'ಅಂಬಾದಾಸ ಖಾಜಾ ಶರಣ' ಎಂಬುದು ಈತನ ಲಾವಣಿಗಳ ಅಂಕಿತವಾಗಿದೆ. ಈತನ ರಚನೆಗಳನ್ನು ಒಂದೆಡೆ ಸಂಕಲಿಸುವ, ಸಂಪಾದಿಸಿ, ಪ್ರಕಟಿಸುವ ಕಾರ್ಯ ಇನ್ನೂ ಆಗಬೇಕಾಗಿದೆ.

೪ : ೧೫. ಮಲ್ಲಿಕಾರ್ಜುನ ತ್ರಿಮುಖೆ :

ಕಲಬುರ್ಗಿ ಸಮೀಪದ ಕಮಲಾಪೂರ ಲಾವಣಿಕಾರನೀತ. ಅದೇ ಗ್ರಾಮದ 'ಕಲ್ಯಾಣಿ' ಈತನ ಶಿಷ್ಯ. ಮಲ್ಲಿಕಾರ್ಜುನ ತ್ರಿಮುಖೆ ದಲಿತ ಲೋಕದ 'ಡೋಹರ' ಜಾತಿಗೆ ಸೇರಿದ ಅದ್ಭುತ ಗಾಯಕ. ಲಾವಣಿ ರಚಿಸುವುದು, ಗೀಗೀ ಮೇಳ ಕಟ್ಟಿಕೊಂಡು ಹಾಡು-ಹಾಡುವುದು ಈತನ ಹವ್ಯಾಸವಾಗಿತ್ತು. ಆಧುನೀಕರಣದ ಒತ್ತಡಕ್ಕೆ ಸಿಲುಕಿ, ಹಾಡಿನ ಮೇಲೆ ಹೊಟ್ಟೆ ತುಂಬಿಸಿಕೊಳ್ಳುವುದು ಅಸಾಧ್ಯವಾದ್ದರಿಂದ, ಮುಂಬಯಿ ಸೇರಿದನೆಂದು ತಿಳಿದುಬರುತ್ತದೆ. ದುಡಿಯುವ ವರ್ಗದಿಂದ ಎದ್ದು ಬಂದ ಈ ಲಾವಣಿಕಾರನ ಹಾಡುಗಳಿಗೆ ಸಾವಳಗಿ ದೇಗಾಂಯಿ ಪರಂಪರೆಯಲ್ಲಿ ಹೆಚ್ಚಿನ ಮಹತ್ವವಿದೆ. ಇವನ ಸಾಹಿತ್ಯವನ್ನು ಸಂಗ್ರಹಿಸಿ ಪ್ರಕಟಿಸುವ ಅವಶ್ಯಕತೆಯಿದೆ.

೪ : ೧೬ ಸಮಾರೋಪ :

ಸಾವಳಗಿ ದೇಗಾಂಯಿ ಲಾವಣಿಕಾರರಲ್ಲಿ ಬೆರಗುಗೊಳಿಸುವ ವೈವಿಧ್ಯತೆಯಿದೆ. ಮಹಮ್ಮದೀಯರು, ಕಬ್ಬಲಿಗರು, ಗೊಂದಲಿಗರು, ಡೋಹರರು, ದಲಿತರು, ಕ್ಷತ್ರಿಯರು, ವೀರಶೈವರು ಮತ್ತು ಬ್ರಾಹ್ಮಣರು ಮುಂತಾಗಿ ವಿವಿಧ ಜಾತಿ–ಮತ ಪಂಥದಿಂದ ದುಡಿಯುವ ವರ್ಗದಿಂದ ಬಂದ ಹಾಡುಗಾರರಿದ್ದಾರೆ. ಈ ಭಾಗದ ಲಾವಣಿಕಾರರಲ್ಲಿ ವೀರಶೈವರೇ ಸಂಖ್ಯೆಯಲ್ಲಿ ಹೆಚ್ಚಿಗಿದ್ದಾರೆ. ಮುಸ್ಲಿಂರ ಕೊಡುಗೆ ಗಣನೀಯವಾಗಿದೆ. "ನೆನಪಿಡುವ ಸಂಗತಿಯೆಂದರೆ, ಎಲ್ಲ ಲಾವಣಿಕಾರರು ಹೆಚ್ಚಾಗಿ ಪ್ರತಿಪಾದಿಸುವುದು ವೀರಶೈವ ಸಂಸ್ಕೃತಿಯನ್ನು ಮಾತ್ರ. ಈ ಪ್ರದೇಶದಲ್ಲಿ ವೀರಶೈವ ಧರ್ಮವು ಪ್ರಭಾವ ಪೂರ್ಣವಾಗಿರುವುದೇ ಇದಕ್ಕೆ ಕಾರಣ. ಸಾಮಾನ್ಯವಾಗಿ ಮುಸಲ್ಮಾನಪರಂಪರೆಗೆ ಸಂಬಂಧಿಸಿದ ಮಹಮ್ಮದನ ಕಥೆ, ಇತಿಹಾಸ, ಸಂಸ್ಕೃತಿಗಳನ್ನು ಮೊಹರಮ್ ಪದಗಳಲ್ಲಿ ಎಲ್ಲ ಧರ್ಮದ ಲಾವಣಿಕಾರರು, ಪ್ರತಿಭಾಪೂರ್ಣವಾಗಿ ಬಿತ್ತರಿಸಿದ್ದಾರೆ. ನಮ್ಮ ಲಾವಣಿಕಾರರ ಭಾವೈಕ್ಯತೆ, ದೇಶಪ್ರೇಮ, ಸಮಾಜನಿಷ್ಠೆಗಳನ್ನು ಯಾರೂ ಮೆಚ್ಚಬಹುದು"[೮] ಮತ್ತೊಂದು ಮಹತ್ವದ ಅಂಶವೆಂದರೆ ಈ ಭಾಗದ ಲಾವಣಿಕಾರರು ಸಮಕಾಲೀನ ಘಟನೆಗಳಿಗೆ ತೋರಿಸುವ ಪ್ರತಿಕ್ರಿಯೆ ಅನಾದೃಶವಾದದ್ದು. ಸ್ವಾತಂತ್ರ್ಯ ಹೋರಾಟ, ಭೀಕರ ಬರಗಾಲ ಮುಂತಾದವುಗಳನ್ನಿಲ್ಲಿ ಹೆಸರಿಸಬಹುದು. ಸಮಕಾಲೀನ ಇತಿಹಾಸದ ಮೇಲೆ ಜನಪದ ಲಾವಣಿಗಳು, ಹೊಸ ಬೆಳಕು ಚೆಲ್ಲುವುದರಿಂದ ಈ ಭಾಗದ ಲಾವಣಿಗಳಿಗೆ ಐತಿಹಾಸಿಕ ಮಹತ್ವ ಪ್ರಾಪ್ತವಾಗಿದೆ. ಒಟ್ಟಾರೆ ಈ ಪರಂಪರೆಯ ಕೊಡುಗೆ ಅತ್ಯಮೂಲ್ಯವಾಗಿದೆ.

ಅಡಿ ಟಿಪ್ಪಣಿಗಳು :

೧. ಸಾ. ದೇ. ಭಾಗದ ಗೀಗೀ ಹಾಗೂ ಲಾವಣಿಕಾರರು, ಪುಟ : ೧೯೦

೨. ಸಾ. ದೇ. ಭಾಗದ ಗೀಗೀ ಹಾಗೂ ಲಾವಣಿಕಾರರು, ಪುಟ : ೧೯೧

೩. ಜಾನಪದ ಸಾಹಿತ್ಯ ದರ್ಶನ, (ಸಂಪುಟ : ೫) ಪುಟ : ೧೯೧

೪. ಸಾ. ದೇ. ಭಾಗದ ಗೀಗೀ ಹಾಗೂ ಲಾವಣಿಕಾರರು, ಪುಟ : ೧೯೨

೫. ವಿವರಕ್ಕೆ ನೋಡಿ, ಸಾ. ದೇ. ಭಾಗದ ಗೀಗೀ ಹಾಗೂ ಲಾವಣಿಕಾರರು, ಪುಟ : ೧೯೫

೬. ಜಾನಪದ ಸಾಹಿತ್ಯ ದರ್ಶನ, (ಸಂಪುಟ : ೫,) ಪುಟ : ೧೯೫

೭. ಜಾನಪದ ಸಾಹಿತ್ಯ ದರ್ಶನ, (ಸಂಪುಟ : ೫,) ಪುಟ : ೧೯೫

೮. ಸಾ. ದೇ. ಭಾಗದ ಗೀಗೀ ಹಾಗೂ ಲಾವಣಿಕಾರರು, ಪುಟ : ೧೯೬

----- ✤ -----

೫. ಹುಲಕುಂದ ಪರಂಪರೆಯ 'ಗೀಗೀ' ಮೇಳಗಳು

ಪ್ರವೇಶ :

ಕರ್ನಾಟಕದಲ್ಲಿ ಹುಲಕುಂದ ಪರಂಪರೆಯ ಗೀಗೀ ಮೇಳಗಳಿಗೆ ತುಂಬ ಮಹತ್ವವಿದೆ. ಖಾದಿಧಾರಣೆ, ಸ್ವದೇಶಿಮಂತ್ರ, ಸ್ವಾತಂತ್ರ್ಯಾಂದೋಲನ, ರಾಷ್ಟ್ರಭಕ್ತಿ, ದೇಶಪ್ರೇಮ ಬಿತ್ತುವ ಲಾವಣಿಗಳು ಹುಲಕುಂದ ಭಾಗದಿಂದ ಮೂಡಿ ಬಂದಿವೆ. ಹೀಗಾಗಿ ಹುಲಕುಂದದ ಲಾವಣಿಗಳಿಗೆ 'ರಾಷ್ಟ್ರೀಯ ಮನ್ನಣೆ' ಪ್ರಾಪ್ತವಾಗಿದೆ.

ಹುಲಕುಂದ, ಬೆಳಗಾಂವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನ ಒಂದು ಪುಟ್ಟ ಹಳ್ಳಿ. ಭೌಗೋಳಿಕವಾಗಿ ಬಾಗಲಕೋಟ, ಬೆಳಗಾಂವಿ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳನ್ನು ಪ್ರತಿನಿಧಿಸುವ ಪರಂಪರೆಯನ್ನಿದು ಪಡೆದಿದೆ.

೪ : ೧. ಐತಿಹಾಸಿಕ ಘಟ್ಟ :

ಬೆಳಗಾಂವಿ ಜಿಲ್ಲೆಯ ಲಾವಣಿಗಳಿಗೆ ಐತಿಹಾಸಿಕ ಘಟನೆಗಳು ನೀಡಿದ ಪ್ರೇರಣೆ ಅಮೂಲ್ಯವಾಗಿದೆ. ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ ಕಿತ್ತೂರ ಸಂಸ್ಥಾನ, ರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ, ನರಗುಂದದ ಬಾಬಾಸಾಹೇಬ, ಮುಂಡರಗಿ ಭೀಮರಾಯ, ಹಲಗಲಿ ಬೇಡರು, ಸಿಂಧೂರ ಲಕ್ಷ್ಮಣ, ಕಟ್ಟಿಚೆನ್ನ ಮುಂತಾದ ವೀರ-ಶೂರ ಪ್ರಭೃತಿಗಳ ಕುರಿತಾಗಿ ಲಾವಣಿ ಸಾಹಿತ್ಯ ಹೇರಳವಾಗಿ ಸೃಷ್ಟಿಯಾಗಿದೆ. "ಆ ಕ್ರಾಂತಿಕಾರರ, ಮಹಿಳೆಯರ ಸಾಹಸ, ಹೋರಾಟ, ರಾಷ್ಟ್ರಾಭಿಮಾನ, ಸ್ವಾಭಿಮಾನಗಳು ಜನಪದ ಕವಿಗಳಿಗೆ ಸ್ಫೂರ್ತಿ ನೀಡಿವೆ. ದೇಶಪ್ರೇಮದ ಗಾಳಿ ಎಲ್ಲೆಲ್ಲೂ ಬೀಸಿದ್ದರಿಂದ ಚಳುವಳಿ ಸತ್ಯಾಗ್ರಹದ ಬೆಳಕಿನಲ್ಲಿ ಮೂಡಿಬಂದ ದೇಶದ ನೂರಾರು ಮುಖಂಡರು ಲಾವಣಿಗಳಲ್ಲಿ ಪ್ರಜ್ವಲಿಸಿದ್ದಾರೆ"[೧] ಚಾರಿತ್ರಿಕ ವ್ಯಕ್ತಿಗಳ ಸಾಹಸ-ಸಂಗ್ರಾಮ ಸಂಘರ್ಷದ ಬದುಕು ಅನಾವರಣಗೊಂಡಿದೆ.

ಸಂಗೊಳ್ಳಿಯ ಮೋದಿನಸಾಬ ಬಡಿಗೇರ, ನೇಸರಗಿಯ ಅಡಿವೆಪ್ಪಗೌಡ, ಬೆಳಗಾಂವಿಯ ದ್ವಾರಪಾಲ, ಅಂಬಡಗಟ್ಟಿಯ ಎಲ್ಲಣ್ಣ, ಬೈಲಹೊಂಗಲದ ಶ್ಯಾಮರಾವ್, ಹುಲಕುಂದದ ಭೀಮಕವಿ, ಬೆಂಡಿಗೇರಿ ಬಸಪ್ಪ, ಬೆಣಚಿನಮರಡಿಯ ಸಿದ್ದಪ್ಪ ಮುಂತಾದವರು ಅದ್ಭುತವೆನಿಸುವ ಲಾವಣಿ ರಚಿಸಿ, ಗೀಗೀ ಮೇಳಗಳನ್ನು ಕಟ್ಟಿ ಹಾಡಿ-ಹಾಡಿಸಿ ಕೀರ್ತಿಶೇಷರಾಗಿದ್ದಾರೆ.

ಇಂಚಲದ ಕೆಂಚನಾಯ್ಕ, ಸಕ್ರನಾಯ್ಕ, ಬೆಲ್ಲದ ಬಾಗೇವಾಡಿಯ ಬಾಳಗೋಪಾಳ, ಬಾಳಿಗೇರಿ ಅಪ್ಪಣ್ಣ, ಸಾತಯ್ಯ ಯಂಕಚ್ಚಿ, ರಾಮಚಂದ್ರ, ತಾರೀಹಾಳದ ಮಲ್ಲೇಶಿ, ಮಮದಾಪೂರದ ಮಾರೋತೆಪ್ಪ, ಕೌಜಲಗಿ ಲಕ್ಷ್ಮಣ, ಕಿತ್ತೂರ ಬಸವಾರ್ಯ, ಯಕ್ಕುಂಡಿ

ಗುರುಪಾದಪ್ಪ, ಗೋಕಾಕ ಸಾತೂ ಕಾಮಣ್ಣ-ಬನೂ, ಮುರುಗೋಡ ಕುಬಣ್ಣಾ ಮೊದಲಾದವರು ಕಿತ್ತೂರ ಸಂಸ್ಥಾನ ಪತನಾನಂತರದ ಲಾವಣಿಕಾರರಾಗಿ ಪ್ರಸಿದ್ಧರಾಗಿದ್ದಾರೆ.

೫ : ೨ ಸ್ವಾತಂತ್ರ್ಯಾಂದೋಲನ ಘಟ್ಟ :

ಕೈಯಲ್ಲಿ ಡಪ್ಪು ಹಿಡಿದು ಹಳ್ಳಿ ಹಳ್ಳಿಗಳಿಂದ ಪಟ್ಟಣದವರೆಗೆ ಗೀಗೀ ಪದ ಹಾಡಿ, ಜನ-ಮನ ಜಾಗ್ರತಗೊಳಿಸಿದ ಹುಲಕುಂದದ ಭೀಮಕವಿ, ಮನ್ನಿಕಟ್ಟಿ ಗಂಗವ್ವ, ಕಲ್ಲೋಳ್ಳಿ ಪಿಂಜಾರ, ಹಂದಿಗನೂರ ಸೀತಾ, ತಿಗಡೊಳ್ಳಿ ಭೀಮಪ್ಪ, ಹೊಸೂರ ಸೋಮಲಿಂಗ ಮೊದಲಾದವರ ಗೀಗೀ ಮೇಳಗಳು ಗಮನಾರ್ಹವಾಗಿವೆ. ಕವಿ ಶಿವಲಿಂಗ, ಗುರುಪಾದಪ್ಪ, ಪ್ಯಾಟಿಶೆಟ್ರು, ಪಾಂಡಪ್ಪಗೌಡ್ರು, ಸಿದರಾಯಿ, ಸಂಗಪ್ಪ ಮುಂತಾದ ಲಾವಣಿಕಾರರು ಜನಿಸಿದ್ದು ಹುಲಕುಂದದಲ್ಲಿಯೇ ಎಂಬುದು ಗಮನಾರ್ಹ ಸಂಗತಿ. ಇವರು ಲಾವಣಿಗಳನ್ನು ರಚಿಸಿ, ಗೀಗೀ ಮೇಳಗಳನ್ನು ಹುಟ್ಟುಹಾಕಿ ರಾಷ್ಟ್ರೀಯ ಭಾವನೆಗಳನ್ನು ಜಾಗ್ರತಗೊಳಿಸಿರುವದು ವಿಶೇಷವಾಗಿದೆ. ಲಾವಣಿಕಾರರು ಸ್ವಾತಂತ್ರ್ಯಂದೋಲನಕ್ಕೆ ಸ್ಪಂದಿಸಿದ್ದರ ಫಲವಾಗಿ ರಾಷ್ಟ್ರೀಯ ದುರೀಣರ ವ್ಯಕ್ತಿಗತ ವಿಚಾರಗಳು ಮತ್ತು ರಾಷ್ಟ್ರೀಯ ಚಳುವಳಿಯ ವಿದ್ಯಮಾನಗಳನ್ನು ಹೆಚ್ಚು-ಹೆಚ್ಚಾಗಿ ಅರಿತುಕೊಳ್ಳಲು ಸಾಧ್ಯವಾಯಿತು. ಅಭಿವ್ಯಕ್ತಿಸಲು ಪ್ರೇರಣೆ ನೀಡಿತು.

"ಗ್ರಾಮಾಂತರ ಜನರ ಅನಕ್ಷರತೆ ಹಾಗೂ ಅವರನ್ನು ತಲುಪಿಸಲು ಸಾರಿಗೆ ಸಂಪರ್ಕದ ಅಭಾವವಿರುವ ಸಂದರ್ಭದಲ್ಲಿ ಗ್ರಾಮಾಂತರ ಜನರೊಡನೆ ನೇರ ಸಂಪರ್ಕ ಬೆಳೆಸಿ, ಅವರು ರಾಷ್ಟ್ರೀಯ ಚಳುವಳಿಯಲ್ಲಿ ಆಸಕ್ತಿ ತೋರುವಂತೆ ಮಾಡುವಲ್ಲಿ ಲಾವಣಿಯೊಂದೇ ಏಕೈಕ ಹಾಗೂ ಸಮತರ ಸಂವಹನ ಮಾಧ್ಯಮವಾಗಬಹುದೆಂದು ಬಗೆದ ಕಾಂಗ್ರೆಸ್ ಕಾರ್ಯಕರ್ತರು ಲಾವಣಿಕಾರರ ಮೊರೆ ಹೋದುದು, ಪ್ರತಿಯಾಗಿ ಲಾವಣಿಕಾರರು ರಾಷ್ಟ್ರೀಯ ಚಳುವಳಿ ವಿದ್ಯಮಾನಗಳ ಕುರಿತು ಲಾವಣಿ ಸಾಹಿತ್ಯ ರಚನೆ, ಪ್ರಚಾರ, ಪ್ರಸಾರ ಮಾಡುವ ಮೂಲಕ ಗ್ರಾಮೀಣ ಜನರಲ್ಲಿ ರಾಷ್ಟ್ರ-ರಾಷ್ಟ್ರೀಯತೆಯ ಪರಿಕಲ್ಪನೆ ಮೂಡಿಸಿ ರಾಷ್ಟ್ರೀಯ ಚಳುವಳಿಯೆಡೆಗೆ ಆಕರ್ಷಿಸುವಲ್ಲಿ ಯಶಸ್ವಿಯಾದುದು ರಾಷ್ಟ್ರೀಯ ಚಳುವಳಿ ಚರಿತ್ರೆಯಲ್ಲಿ ಮೊಟ್ಟ ಮೊದಲು ಹಾಗೂ ವಿಶಿಷ್ಟ ಪ್ರಯತ್ನವಾಗಿರುವುದಲ್ಲದೇ ಅದು ಅಸ್ತಿತ್ವದಲ್ಲಿದ್ದ ರಾಷ್ಟ್ರ-ರಾಷ್ಟ್ರಿಯತೆ ಕುರಿತು ತಿಳುವಳಿಕೆಯ ಹರುವು ಹೆಚ್ಚಿಸಿದೆ"[೨] ಎಂಬ ಮಾತುಗಳು ನೈಜವಾಗಿದೆ.

೫ : ೩. ಭೀಮಕವಿ :

ರಾಷ್ಟ್ರೀಯ ಲಾವಣಿ ಸಾಹಿತ್ಯದಲ್ಲಿ ಹುಲಕುಂದದ ಭೀಮಕವಿ ಮುಂಚೂಣಿಯಲ್ಲಿದ್ದಾನೆ. ಈತನ ಮೂಲಹೆಸರು ಬಸಪ್ಪ ಸಂಗಪ್ಪ ಬೆಟಗೇರಿ. ಭೀಮಕವಿ ಈತನ ಕಾವ್ಯನಾಮ. ನೇಕಾರ ಮನೆತನದಿಂದ ಬಂದ ಈತ ಕಲಿತದ್ದು ಕೇವಲ ಪ್ರಾಥಮಿಕ ಶಿಕ್ಷಣ. ವೃತ್ತಿ ವಂಶವೃತ್ತಿಯಾದ ನೇಕಾರಿಕೆ, ಪ್ರವೃತ್ತಿ ಜಾನಪದ ಸಾಹಿತ್ಯ, ಅದರಲ್ಲೂ ಲಾವಣಿ ರಚನೆ. ಕಾನೂನುಭಂಗ ಚಳುವಳಿ ಸಮಯದಲ್ಲಿ ರಾಷ್ಟ್ರೀಯ ಕರೆಗೆ ಓಗೊಟ್ಟು ಲಾವಣಿಗಳನ್ನು ರಚಿಸಿದ. ಅವುಗಳನ್ನು ಪರಿಣಾಮಕಾರಿಯಾಗಿ ಮುಟ್ಟಿಸುವುದಕ್ಕಾಗಿ ಗೀಗೀ ಮೇಳಗಳನ್ನು ಹುಟ್ಟುಹಾಕಿದ. ಉಮತಾರ ಬಸಪ್ಪ ನೀಲಗುಂದದ ಬಸವಲಿಂಗಪ್ಪ, ದೊಡವಾಡ ಸೋಮಲಿಂಗ, ಸಂಬಾಳ ಸಂಗಯ್ಯ, ನಾಗನೂರ ದೇವಣ್ಣ, ಮೂಗಬಸವ ಮಲ್ಲಪ್ಪ, ಮಿರ್ಜಿ ಹನುಮಪ್ಪ ಮುಂತಾದ ಸದಭಿರುಚಿಯ ಗೆಳೆಯರ ಗುಂಪನ್ನು ಕಟ್ಟಿ, ಅದಕ್ಕೆ "ಗಾಂಧಿ ಗೀತಮೇಳ"ವೆಂದು ನಾಮಕರಣ ಮಾಡಿದನು. ಹಳ್ಳಿ-ಹಳ್ಳಿಗಳನ್ನು ಸುತ್ತಾಡಿ ರಾಷ್ಟ್ರಪ್ರೇಮವನ್ನು ಬಡಿದೆಬ್ಬಿಸಿದ. ಇದರಿಂದ ಬ್ರಿಟೀಷರ ಕೆಂಗಣ್ಣಿಗೆ ಗುರಿಯಾಗಿ ಜೇಲು ಸೇರಿ, ಅಪಾರ ಕಷ್ಟಕ್ಕೊಳಗಾದ. ಆದರೂ ಎದೆಗುಂದದೆ, ತನ್ನ ಮಗ ಸಂಗಪ್ಪನ ಮೂಲಕ ಚಳುವಳಿಯನ್ನು ಮುಂದುವರೆಸಿದ್ದು ಈತನ ದೇಶಪ್ರೇಮಕ್ಕೆ ಉಜ್ವಲ ಉದಾಹರಣೆಯಾಗಿದೆ. ಟಿಳಕ, ಗೋಖಲೆ, ಗಾಂಧೀಜಿ, ಸುಭಾಸಚಂದ್ರ ಭೋಸ್ ಮೊದಲಾದ ರಾಷ್ಟ್ರೀಯ ನಾಯಕರು; ಮೈಲಾರ ಮಹಾದೇವಪ್ಪ, ವಾಲೀ ಚೆನ್ನಪ್ಪ ಮುಂತಾದ ಕರ್ನಾಟಕದ (ಸ್ವಾತಂತ್ರ್ಯಾಂದೋಲನದ) ಧುರೀಣರು, ಉಪ್ಪಿನ ಸತ್ಯಾಗ್ರಹ, ಚಲೇಜಾವ ಚಳುವಳಿ, ಖಾದಿಧಾರಣೆ, ಸ್ವದೇಶಿ ಮಂತ್ರ, ಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ ಮತ್ತು ಕರ್ನಾಟಕದ ಏಕೀಕರಣ ಚಳುವಳಿ ಮುಂತಾದ ಹತ್ತು ಹಲವು ರಚನಾತ್ಮಕ ವಿಷಯಗಳ ಕುರಿತಾಗಿ ಭೀಮಕವಿ ಸಾವಿರಾರು ಲಾವಣಿ ರಚಿಸಿದ್ದಾನೆ. "ಹುಲಕುಂದ ಭೀಮಕವಿಯು ೨೦ನೆಯ ಶತಮಾನದ ಸರ್ವಜ್ಞನೆಂದರೆ ಅತಿಶಯೋಕ್ತಿಯಾಗದು. ಇವರ ಗೀಗೀ ಪದಗಳು, ಜನಪದ ಗೀತೆಗಳು ಕರ್ನಾಟಕದ ಪ್ರತಿ ಹಳ್ಳಿ ಹಳ್ಳಿಯಲ್ಲಿಯೂ ಪ್ರಚಾರದಲ್ಲಿವೆ"[೨] ಈ ಮಾತುಗಳು ಭೀಮಕವಿಯ ಲಾವಣಿಯ ಕಾವ್ಯಸತ್ತ್ವ ಹಾಗೂ ಆತ ಸಂಘಟಿಸಿ ಪ್ರಸ್ತುತ ಪಡಿಸುವ ಗೀಗೀ ಮೇಳದ ಸಾಮರ್ಥ್ಯಕ್ಕೆ ಸಾಕ್ಷಿಯಾಗಿವೆ.

೫ : ೪. ಶಿವಲಿಂಗಕವಿ :

ಈತ ಹುಲಕುಂದದವನು. ಪ್ರಸಿದ್ಧ ಲಾವಣಿಕಾರ. ಮಠಾಧಿಪತಿಯಾಗಿದ್ದು ಲಾವಣಿ ರಚಿಸಿ, ರಾಷ್ಟ್ರೀಯತೆಯ ಭಾವನೆ ತುಂಬಿದ್ದು ಅಪೂರ್ವವಾಗಿದೆ. ಗೀಗೀ ಪದ, ಡೊಳ್ಳಿನ ಹಾಡು, ಬಯಲಾಟ ರಚನೆ ಮಾಡಿರುವುದಲ್ಲದೆ, ಮೇಳ ಕಟ್ಟಿ ಹಾಡಿ, ವೇಷತೊಟ್ಟು ರಂಗದ ಮೇಲೆ ಪ್ರದರ್ಶನ ನೀಡಿದ್ದು ಗಮನಾರ್ಹವಾಗಿದೆ. ಮಹಾತ್ಮಾ ಗಾಂಧೀಜಿ, ಸುಭಾಸ ಚಂದ್ರ ಭೋಸರ ಕುರಿತಾಗಿರುವ ಲಾವಣಿಗಳು ತುಂಬ ಜನಪ್ರಿಯವಾಗಿವೆ. ಪಾನನಿರೋಧ, ಅಸ್ಪ್ರಶ್ಯತಾ ನಿವಾರಣೆ ಮುಂತಾದ ಅಂಶಗಳನ್ನು ಸಮಾಜದಲ್ಲಿ ಪ್ರಸಾರಗೊಳಿಸುವಲ್ಲಿ ಗುರುತರ ಪಾತ್ರವಹಿಸಿದ್ದಾನೆ.

ಶಿವಲಿಂಗನ ಗೀಗೀ ಪದಗಳನ್ನು ಹಳ್ಳಿ-ಹಳ್ಳಿಗಳಲ್ಲಿ ಪ್ರಚಾರಗೊಳಿಸಿದವರೆಂದರೆ ಭೀಮಶಿ ಹಣಮಸಾಗರ, ಹಂಚಿನಾಳ ಸೈದುಸಾಬ, ರಾಮದುರ್ಗ ದುಂಡಿರಾಜ ಲಿಮಯೆ, ಮನ್ನಿಕಟ್ಟಿ ಗಂಗವ್ವ, ಯಡ್ರಾಂವಿ ಗಂಗವ್ವ ಮುಂತಾದವರು ಪ್ರಮುಖರಾಗಿದ್ದಾರೆ.

೫ : ೫. ರಾಣಿಬೆನ್ನೂರ ಸಮ್ಮದಸಾಬ :

ರಾಣಿಬೆನ್ನೂರಿನ ಸಮ್ಮದಸಾಬ ವೃತ್ತಿಯಿಂದ ದೇಶೀ ಔಷಧ ವ್ಯಾಪಾರಿ, ಪ್ರವೃತ್ತಿಯಿಂದ ಲಾವಣಿಕಾರ. ಧಾರವಾಡ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರಾದ ಟಿ. ಆರ್.ನೇಸ್ವಿ, ಕೆ.ಎಫ್. ಪಾಟೀಲ, ಅವರಿಂದ ಪ್ರಭಾವಿತನಾಗಿ ಸ್ವಾತಂತ್ರ್ಯಾಂದೋಲನದಲ್ಲಿ ಧುಮುಕಿದವ. ಮೈಲಾರ ಮಹಾದೇವಪ್ಪ, ಕ್ರಾಂತಿವೀರ ವಾಲಿಚೆನ್ನಪ್ಪ ಕರ್ನಾಟಕದ ಕಲಿಗಳ ಕುರಿತಾಗಿ ಲಾವಣಿ ರಚಿಸಿ, ಗೀಗೀ ಮೇಳಗಳ ಮೂಲಕ ಪ್ರಚಾರಗೊಳಿಸಿ, ಜನತೆಗೆ ರಾಷ್ಟ್ರೀಯ ಸಂದೇಶ ತಲಪಿಸಿ ಸ್ವದೇಶಾಭಿಮಾನದ ಕಿಚ್ಚು ಹಚ್ಚಿದ್ದು ಮಹತ್ವದ ಅಂಶವಾಗಿದೆ.

೫ : ೬. ಕಲಾದಗಿ ಇನಾಂದಾರ :

ಬಾಗಲಕೋಟ ಜಿಲ್ಲೆಯ ಕಲಾದಗಿ ಇನಾಂದಾರ, ರಾಷ್ಟ್ರೀಯ ಚಳುವಳಿಯಿಂದ ಪ್ರಭಾವಿತನಾದ ಮತ್ತೋರ್ವ ಲಾವಣಿಕಾರ. 'ಕಲಾದಗಿ ಇನಾಂದಾರ' ಅಂಕಿತದಲ್ಲಿ ನೂರಾರು ಗೀಗೀ ಪದ ಬರೆದು ಹಾಡುವ ಮೂಲಕ ರಾಷ್ಟ್ರೀಯ ಚಳುವಳಿಗೆ ತನ್ನ ಸೇವೆ ಸಲ್ಲಿಸಿದ್ದಾನೆ.

೫ : ೭. ಬಾಳಗೋಪಾಳ :

ಬೆಳಗಾಂವಿ ಜಿಲ್ಲೆಯ ಬೆಲ್ಲದ ಬಾಗೇವಾಡಿಯವನಾದ ಈತ, ಕನ್ನಡ, ಮರಾಠಿ ಎರಡೂ ಭಾಷೆಗಳಲ್ಲಿ ಪ್ರಭುತ್ವ ಹೊಂದಿದಾತ. ತನ್ನ ಬದುಕನ್ನು ಲಾವಣಿ ರಚನೆಗೆ, ಗೀಗೀ ಮೇಳದ ಸಂಘಟನೆಗೆ ಅರ್ಪಿಸಿಕೊಂಡ ಅಪರೂಪದ ವ್ಯಕ್ತಿ. ಕನ್ನಡ ನಾಡಿನ

ಉದ್ದಗಲಕ್ಕೂ ಸಂಚರಿಸಿ ತನ್ನ ಗೀಗೀ ಪದಗಳ ಮೂಲಕ ಜನಜಾಗೃತಿಗೊಳಿಸಿದ್ದಾನೆ. ಮಹಾರಾಷ್ಟ್ರದ ಮೀರಜ, ಸಾಂಗಲಿ, ಕೊಲ್ಲಾಪುರ, ಪುಣೆ, ಮುಂಬಯಿ ಮುಂತಾದೆಡೆಗಳಲ್ಲಿಯೂ ಗೀಗೀ ಪದಗಳ ಕಹಳೆ ಮೊಳಗಿಸಿದ್ದಾನೆ.

೫ : ೮. ರಾಣಾಕುಬಣ್ಣ :

ಈತ ಮೂಲತಃ ಮುರುಗೋಡದವ. ಕಿತ್ತೂರ ಸಂಸ್ಥಾನ ಪತನಾನಂತರ ಬ್ರಿಟೀಷರ ಕಾಟಕ್ಕೆ ಬೇಸತ್ತು, ಮಹಾಲಿಂಗಪುರದಲ್ಲಿ ನೆಲೆಸಿದನು. ನಾಗೇಶಿ ಪಕ್ಷವಹಿಸಿ ಹಾಡುವ ಲಾವಣಿಕಾರ. ಈ ಕುಬ್ಬಣ್ಣ, 'ರಾಣು' ಎಂಬುವವನಿಂದ ಗೀಗೀ ಹಾಡಲು ಕಲಿತದ್ದರಿಂದ ತನ್ನ ಗುರುವಿನ ಹೆಸರನ್ನು ಸ್ಮರಿಸಿ, 'ರಾಣಾಕುಬಣ್ಣ' ಎಂಬ ಅಂಕಿತವಿರಿಸಿ ಲಾವಣಿ ರಚಿಸಿದ್ದಾನೆ. ಬಾಳಗೋಪಾಳನ ಜೊತೆಗೂಡಿ ಗೀಗೀ ಮೇಳ ಸಂಘಟಿಸಿ ಹಾಡುತ್ತಿದ್ದ ಸಂಗತಿ ತಿಳಿಯುತ್ತದೆ.

೫ : ೯. ಗುರುಪಾದಪ್ಪ :

ಈತ "ಗೀಗೀ ಪದ ಹಾಡೋ ಗುರುಪಾದಪ್ಪ" ಎಂದೇ ಚಿರಪರಿಚಿತನಾಗಿದ್ದಾನೆ. ಸ್ವತಃ ಲಾವಣಿ ರಚಿಸಿದ್ದಲ್ಲದೆ, ಸೊಗಸಾಗಿ ಹಾಡುವ ಕಂಠಸಿರಿಯನ್ನು ಪಡೆದಾತ. ಗೀಗೀ ಮೇಳಕಟ್ಟಿ ನಾಡಿನ ತುಂಬೆಲ್ಲ ಹಾಡಿ, ಹೆಸರು ಗಳಿಸಿದಾತ. ಈತನ ಲಾವಣಿಗಳನ್ನು ಸಂಕಲಿಸಿ ಪ್ರಕಟಿಸಬೇಕಾಗಿದೆ.

೫ : ೧೦. ಚೆನ್ನಬಸಪ್ಪ ಪಾಂಡಪ್ಪ ಗೌಡರು :

ಈತ 'ಪ್ಯಾಟಿಶೆಟ್ರು' ಎಂಬ ಹೆಸರಿನಿಂದಲೇ ಖ್ಯಾತಿಗೊಂಡಾತ. ಹಲವಾರು ವಿಷಯಗಳ ಕುರಿತಾಗಿ ನೂರಾರು ಲಾವಣಿ ರಚಿಸಿ ಸೊಗಸಾಗಿ ಹಾಡಿದ ಗಾಯಕ. ೧೮೭೭ ರಿಂದ ೧೯೩೨ ರವರೆಗೆ ಜೀವಿಸಿದಾತ. ಚನ್ನಬಸಪ್ಪನೊಂದಿಗೆ ಕೂಡಿ ಹಾಡಿ, ಗೀಗೀ ಮೇಳ ಕಟ್ಟಿದ ಮತ್ತೊಬ್ಬ ವ್ಯಕ್ತಿ ಪಾಂಡಪ್ಪಗೌಡ. ಇವರಿಬ್ಬರೂ ಕೂಡಿಯೇ ಲಾವಣಿ ರಚಿಸಿ, ಗೀಗೀ ಮೇಳ ಸಂಘಟಿಸಿ, ಹಾಡು-ಹಾಡುತ್ತಿದ್ದರು. ಇದರಿಂದ ಜನ ಇವರನ್ನು 'ಚನ್ನಬಸಪ್ಪ-ಪಾಂಡಪ್ಪಗೌಡ'ರು ಎಂದು ಇಬ್ಬರ ಹೆಸರನ್ನು ಜೊತೆ ಜೊತೆಯಾಗಿಯೇ ಹೇಳುತ್ತಿದ್ದರು. 'ಪ್ಯಾಟಿಶೆಟ್ರು' ಎಂದೇ ಹೆಚ್ಚು ಜನರಿಗೆ ಪರಿಚಿತರಾದರು.

೫ : ೧೧. ಮರಿಕಲ್ಲ ಕವಿ :

ಮರಿಕಲ್ಲಪ್ಪ ರುದ್ರಪ್ಪ ಮಲಶೆಟ್ಟಿ ಅಭಿಜಾತ ಪ್ರತಿಭೆಯ ಲಾವಣಿಕಾರ, ಅಪೂರ್ವ ಹಾಡುಗಾರ. ಚೆನ್ನಮ್ಮನ ಕಿತ್ತೂರ ಬಳಿಯ 'ತಿಗಡೊಳ್ಳಿ' ಗ್ರಾಮದವನೀತ. ತಮ್ಮ ತಂದೆಯಿಂದ ಲಾವಣಿಯನ್ನು ಬಳುವಳಿಯಾಗಿ ಪಡೆದಾತ. ಎಂಟು ವರುಷದವನಿದ್ದಾಗಲೇ ಗೀಗೀ ಮೇಳದಲ್ಲಿ ಹಾಡಿದ ಪ್ರತಿಭಾನ್ವಿತ ಗಾಯಕ. ೧೯೪೨ರ ಚಲೇಜಾವ ಚಳುವಳಿಯಲ್ಲಿ ಧುಮುಕಿದ ಸ್ವಾತಂತ್ರ್ಯ ಹೋರಾಟಗಾರ. "೧೯೪೩ರಲ್ಲಿ ಬ್ರಿಟೀಷರಿಂದ ಬಂಧಿಸಲ್ಪಟ್ಟು ಬೆಳಗಾಂವಿ ಕಿಲ್ಲಾ ಬಯಲು ಜೇಲಿನಲ್ಲಿ ಒಂದೂವರೆ ವರುಷ ಕಳೆದರು. ಅಲ್ಲಿ ಬಸಪ್ಪ ಬೆಟಗೇರಿ (ಭೀಮಕವಿ), ಹುಲಕುಂದ ಮಾಸ್ತರ ಸಂಪರ್ಕ ಬಂತು. ಇದರಿಂದಾಗಿ ಹೊಸದೆಸೆ ಪ್ರಾಪ್ತವಾಯ್ತು. ಜೈಲಿನಲ್ಲಿಯೇ ಹುಲಕುಂದ ಮಾಸ್ತರರು 'ಗೀಗೀ ಮೇಳ' ಕಟ್ಟಿದರು. ಈಗಾಗಲೇ ಒಂದಿಷ್ಟು ಲಾವಣಿ ಗೀಗೀ ಸಂಸ್ಕಾರ ಪಡೆದಿದ್ದ ಮರಿಕಲ್ಲಪ್ಪನವರು ಸಮರ್ಥ ಹಿಮ್ಮೇಳದವರಾಗಿ ಮಾಸ್ತರರ ಗೀಗೀ ಮೇಳ ಸೇರಿಕೊಂಡರು."[೪]

ಅಶ್ಲೀಲತೆಯ ಸೊಂಕಿಲ್ಲದೆ, ಜ್ಞಾನ-ಭಕ್ತಿ, ರಾಷ್ಟ್ರೀಯ ನೀತಿಗಳಿಗೆ ಸಂಬಂಧಿಸಿದ ಹಾಡುಗಳನ್ನು ಮಾತ್ರ ಹಾಡುತ್ತಿದ್ದ ಮರಿಕಲ್ಲಪ್ಪನವರಿಗೆ ವಿಶೇಷವಾಗಿ ಮಾನ್ಯತೆ ಲಭಿಸಿತ್ತು, ಜನಾದರ ಪ್ರಾಪ್ತವಾಯ್ತು.

೫ : ೧೨. ಸಂಗಪ್ಪ ಬೆಟಗೇರಿ (ಕಂದಭೀಮಕವಿ) :

ಭೀಮಕವಿಯ ಸಂಪ್ರದಾಯವನ್ನು, ಅವರ ಲಾವಣಿ ರಚನಾ ಪ್ರತಿಭೆಯನ್ನು ಉಳಿಸಿ ಬೆಳೆಸಿದವನೆಂದರೆ, ಆತನ ಮಗ ಸಂಗಪ್ಪ ಬೆಟಗೇರಿ. ತಂದೆಯ ಗರಡಿಯಲ್ಲಿ ಪಳಗಿದ ಸಂಗಪ್ಪ ಸುಪ್ರಸಿದ್ಧ ಹಾಡುಗಾರ. ತಂದೆಯಂತೆಯೇ ವೈವಿಧ್ಯಮಯ ಲಾವಣಿಗಳನ್ನು ರಚಿಸಿದ್ದಾನೆ. ಗೀಗೀ ಮೇಳ ಸಂಘಟಿಸಿ ಜನಜಾಗೃತಿ ಮಾಡುತ್ತಿದ್ದಾರೆ. ಇವರ ಗೀಗೀ ಪದಗಳು "ಜಾನಪದ ಸತ್ವದಿಂದ ಮಣ್ಣಿನ ಗುಣದಿಂದ ಒಡಮೂಡಿದ್ದು, ಕವಿಯ ರಾಷ್ಟ್ರೀಯ ಪ್ರಜ್ಞೆ ಸಾಮಾಜಿಕ ಕಳಕಳಿ ಮೆಚ್ಚುವಂಥವುಗಳು, ಜಾನಪದ ಸತ್ವ ಇನ್ನೂ ಜೀವಂತವಾಗಿದೆ ಎನ್ನುವುದಕ್ಕೆ"[೫] ಸಂಗಪ್ಪನವರೇ ಸಾಕ್ಷಿಯಾಗಿದ್ದಾರೆ.

ಬಸವಣ್ಣ, ಅಕ್ಕಮಹಾದೇವಿ, ಡಾ. ಬಾಬಾಸಾಹೇಬ ಅಂಬೇಡ್ಕರ್, ಸುಭಾಸ್‌ಚಂದ್ರ ಭೋಸ್, ವಿನೋಬಾಭಾವೆ ಮುಂತಾದ ವ್ಯಕ್ತಿ ಚಿತ್ರಗಳು ರಾಷ್ಟ್ರೀಯ ವಿಸ್ತರಣಾ ಯೋಜನೆ,

ಚಿಕ್ಕ ಉಳಿತಾಯ, ಕುಟುಂಬಕಲ್ಯಾಣ, ಸಹಕಾರತತ್ವ, ಪ್ರೌಢಶಿಕ್ಷಣ, ಸಮಾಜಸುಧಾರಣೆ, ಕರ್ನಾಟಕರಾಜ್ಯೋತ್ಸವ ಮುಂತಾದ ರಚನೆಗಳಿಂದ ನಾಡಿನ ತುಂಬ ಗೀಗೀ ಪದಗಳ ಕಂಪು ಹರಿಸಿದ್ದಾರೆ.

ಹುಲಕುಂದ ಪರಂಪರೆಯ ಇತರ ಲಾವಣಿಕಾರರೆಂದರೆ ಯಾದವಾಡದ ರಾಮಚಂದ್ರ ಧರ್ಮಣ್ಣ ಶೇರಖಾನೆ, ಮುಧೋಳದ ಮೋತಿಲಾಲ, ಕೊಣ್ಣೂರದ ಸಿದ್ದಪ್ಪ ಸುಣಗಾರ, ಸಿದ್ಧಾಪುರದ ಶಿರಬೂರ ಜಕ್ಕವ್ವ , ಉಮರಾಣಿ ಜಕ್ಕವ್ವ , ಮಣ್ಣೂರದ ಸಿದ್ಧಗೌಡ ಮಗದುಮ್ಮ ಮುಂತಾದವರು ಪ್ರಮುಖರಾಗಿದ್ದಾರೆ.

೫ : ೧೩. ಸಮಾರೋಪ :

ಈ ರೀತಿಯಾಗಿ ಹುಲಕುಂದ ಪರಂಪರೆಯ ಲಾವಣಿಗಳು ಗೀಗೀ ಮೇಳ ಮಾಡಿದ ಕಾರ್ಯ ಅನನ್ಯವಾಗಿದೆ. "ರಾಷ್ಟ್ರೀಯ ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರುವ ರಾಷ್ಟ್ರೀಯ ಲಾವಣಿಗಳು ಭಾರತದ ಗತವೈಭವ, ರಾಷ್ಟ್ರೀಯ ಚಳುವಳಿ, ನೇತಾರರ ವ್ಯಕ್ತಿ ವಿಚಾರಗಳನ್ನು ಗ್ರಾಮಾಂತರ ಪ್ರದೇಶದ ಜನರಿಗೆ ಪರಿಚಯ ಮಾಡಿಕೊಟ್ಟು ಅವರನ್ನು ರಾಷ್ಟ್ರೀಯ ಚಳುವಳಿಯೆಡೆಗೆ ಆಕರ್ಷಿಸಿದರು. ಸ್ವರಾಜ್ಯ ಪರಿಕಲ್ಪನೆಯ ಪರಿಚಯ ಮತ್ತು ಅದಕ್ಕಾಗಿ ನಡೆದ ರಾಷ್ಟ್ರೀಯ ಚಳುವಳಿಯಲ್ಲಿ ಪಾಲ್ಗೊಂಡು ತುರಂಗಕ್ಕೆ ತಳ್ಳಲ್ಪಟ್ಟರೂ ಅಂಜದಿರಲು ಜನಸಾಮಾನ್ಯರಿಗೆ ಧೈರ್ಯ ತುಂಬಿದವು. ಹಾಗೆಯೇ ಅಸಹಕಾರ ಚಳುವಳಿ, ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳುವಳಿ, ದ್ವಿತಿಯ ಮಹಾಯುದ್ಧ ಹಾಗೂ ಆನಂತರ ನಡೆದ ಸ್ವದೇಶಿ ಜಾಗತಿಕ ಘಟನೆಗಳು ಭಾರತದ ರಾಷ್ಟ್ರೀಯ ಚಳುವಳಿ ಉದ್ದೇಶ ಈಡೇರಿಸುವಲ್ಲಿ ನೆರವಾದ ಬಗೆಯನ್ನು ಪತ್ರಿಕೋಪಾದಿಯಲ್ಲಿ ಅರುಹುವ ಮೂಲಕ ಗ್ರಾಮಾಂತರ ಪ್ರದೇಶದ ಜನರ ರಾಜಕೀಯ ಪರಿಜ್ಞಾನ ಹೆಚ್ಚಿಸಿದವರಲ್ಲದೆ, ಅವರಲ್ಲಿ ರಾಷ್ಟ್ರ , ರಾಷ್ಟ್ರೀಯತೆಯ ಪರಿಕಲ್ಪನೆ ಮೂಡಿಸಿ ರಾಷ್ಟ್ರೀಯ ಚಳುವಳಿ ಜಯಗೊಳ್ಳಬೇಕೆಂಬ ಪ್ರಬಲ ಆಕಾಂಕ್ಷೆ ವ್ಯಕ್ತಪಡಿಸುವುದಕ್ಕೆ ಕಾರಣವಾದವೆಂಬ ಸಂಗತಿ"[೬]ಯನ್ನು ಮರೆಯುವಂತಿಲ್ಲ.

ಹೀಗೆ ಹುಲಕುಂದ ಭಾಗದ ಲಾವಣಿಕಾರರು ಹಾಗೂ ಗೀಗೀ ಮೇಳಗಳು ಜಾನಪದ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪ್ರತಿಮವಾಗಿದೆ. ಸ್ವಾತಂತ್ರ್ಯದ ನಂತರವೂ ಹುಲಕುಂದದ

ಪರಂಪರೆ ಮುಂದುವರೆದಿದೆ. ಪಂಚವಾರ್ಷಿಕ ಯೋಜನೆ, ಕುಟುಂಬ ಕಲ್ಯಾಣ, ಸರ್ವೋದಯ ಚಳುವಳಿ, ಸಾಕ್ಷರತಾ, ಚಿಕ್ಕ ಉಳಿತಾಯ, ಏಡ್ಸ್ ಜಾಗೃತಿ ಮುಂತಾದ ವಿಷಯಗಳನ್ನು ಒಳಗೊಂಡ ಲಾವಣಿಗಳು ರಚನೆಗೊಂಡಿವೆ. ಅವುಗಳನ್ನು ಹಾಡುವ ಮೇಳಗಳೂ ಇವೆ. ಆದರೆ ಮುಂಚಿನ ಸತ್ವ ಹಾಗೂ ಪ್ರಖರತೆಯಿಲ್ಲ. ಅಂದಿನ ಔನ್ನತ್ಯವಾಗಲಿ, ವೈವಿಧ್ಯತೆಯಾಗಲಿ ಇಲ್ಲ. ಬಹುಶಃ ಸಮಕಾಲೀನ ಸಂಕೀರ್ಣತೆಯೇ ಇದಕ್ಕೆ ಕಾರಣವಾಗಿರಬಹುದು.

೫ : ೧೪. ಸಮಕಾಲೀನ ಗೀಗೀ ಹಾಡುಗಾರರು :

ಉದಾರೀಕರಣ, ಜಾಗತೀಕರಣ, ಖಾಸಗೀಕರಣ ಮುಂತಾದ ಆಧುನಿಕ ವಿದ್ಯಮಾನಗಳಲ್ಲಿಯೂ ಲಾವಣಿಸಾಹಿತ್ಯ ತನ್ನ ಅಸ್ತಿತ್ವವನ್ನು, ತನ್ನ ದೇಶಿಯ ಸೊಗಡನ್ನು ಕಾಪಾಡಿಕೊಂಡಿರುವುದು ವಿಶೇಷವಾಗಿದೆ. ಸಮಕಾಲೀನ ಗೀಗೀ ಹಾಡುಗಾರರೆಂದರೆ ಕುಳಲಿ ಭೀಮಪ್ಪ, ಚೆನ್ನಪ್ಪ ಮದರಖಂಡಿ, ಶಿವಲಿಂಗ ದಿಗ್ಗೇವಾಡಿ, ರಾಮಪ್ಪ ಉತ್ತೂರ, ಸುಬ್ಬಣ್ಣ ಮುರಗುಂಡಿ, ರಾಯಪ್ಪ ಕುಡಚಿ, ರಾಯಪ್ಪ ಮದರಖಂಡಿ, ತಿಪ್ಪಣ್ಣ ದೋಸಗೇರ, ನಾಗನೂರ ಮರೆಪ್ಪ, ಸೀತವ್ವ ಜಮಖಂಡಿ, ಲಕ್ಷ್ಮೀಬಾಯಿ ಬಡಚಿ, ಬಬಲೇಶ್ವರ ಬಂಗಾರೆವ್ವ, ರುಕಮವ್ವ ಯಂಕಂಚಿ, ಯಮುನವ್ವ ಮಹಾಲಿಂಗಪುರ, ಕಾಶವ್ವ ಮಾರಾಪೂರ, ರತ್ನಾಬಾಯಿ ಕವಲಗುಡ್ಡ, ರಾಣವ್ವ ಜಂಬಗಿ, ಯಂಕಚ್ಚಿ ಯಮನವ್ವ, ಕನಮಡಿ ಮಲ್ಲವ್ವ , ಉಮರಾಣಿ ಕಾಶವ್ವ , ಕೆಸರಗೊಪ್ಪ ರಾಣವ್ವ , ತೇರದಾಳ ಸೋನವ್ವ , ಬಾಡಗಿ ಗಂಗವ್ವ, ಗೆನ್ನೂರ ಲಚ್ಚವ್ವ , ಹೊನವಾಡ ಯಮನಪ್ಪ ಇನ್ನೂ ಅಸಂಖ್ಯಾತ ಗೀಗೀ ಹಾಡುಗಾರರು ಹಳ್ಳಿ-ಹಳ್ಳಿಗಳಲ್ಲಿ ಚೆಲ್ಲುವರೆದಿದ್ದಾರೆ. ನಿಜವಾದ ಜಾನಪದ ಕಲಾವಿದರಿಗೆ, ಅಪ್ಪಟ ದೇಶೀ ಪ್ರತಿಭೆಗಳಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಜ್ಯ ಜಾನಪದ ಅಕಾಡೆಮಿ, ಆಕಾಶವಾಣಿ, ದೂರದರ್ಶನ ಮುಂತಾದ ಸರಕಾರಿ ಸಂಸ್ಥೆಗಳ ನೆರವು ದೊರೆತಿಲ್ಲ. ಕಲಾವಿದ ಬದುಕಿದರೆ,

ಕಲೆ ತಂತಾನೆ ಬದುಕುತ್ತದೆ. 'ಡೊಂಗಿ' ಕಲಾಕಾರರನ್ನು ಬದಿಗಿರಿಸಿ, ನೈಜ ದೇಶೀಯ ಕಲಾವಿದರನ್ನು ಗುರುತಿಸಿ ಗೌರವಿಸಿದರೆ ಸರಕಾರದ ಯೋಜನೆಗಳು ಯಶಸ್ವಿಯಾಗುತ್ತವೆ. ಈ ದೆಸೆಯಲ್ಲಿ ಸಮಾಜ, ಸರಕಾರ ಪ್ರಾಮಾಣಿಕವಾಗಿ ಪ್ರಯತ್ನಿಸಬೇಕಾದ ಅವಶ್ಯಕತೆಯಿದೆ.

ಅಡಿ ಟಿಪ್ಪಣಿಗಳು :

೧. ಡಾ. ಎಂ. ಎಸ್. ಲಠ್ಠೆ – ಹುಲಕುಂದ ಭಾಗದ ಲಾವಣಿಕಾರರು, ಪುಟ : ೨೧೧

೨. ಲಾವಣಿ ಸಾಹಿತ್ಯದಲ್ಲಿ ರಾಷ್ಟ್ರೀಯತೆ ಕೃತಿಯ 'ಬೆನ್ನುಡಿ'ಯಲ್ಲಿ

೩. ಹುಲಕುಂದ ಭೀಮಕವಿ ಕೃತ ಗೀಗೀ ಪದ ಸಂಗ್ರಹ, ಪುಟ : ೧

೪. ಮರಿಮಲ್ಲ ಕವಿಯ ಗೀಗೀ ಪದಗಳು, ಪುಟ : X

೫. ಜನಪದ ರಾಷ್ಟ್ರೀಯ ಗೀಗೀ ಪದಗಳು ಕೃತಿಯ 'ಬೆನ್ನುಡಿ'ಯಲ್ಲಿ.

೬. ಲಾವಣಿ ಸಾಹಿತ್ಯ ಹಾಗೂ ರಾಷ್ಟ್ರೀಯ ಚಳುವಳಿ, ಪುಟ : ೬೫

----- ✻ -----

ಶುಭವಾಗಲಿ

ಹರಿವನೀರಿನಂತೆ, ಸದಾ ಜಂಗಮಶೀಲತ್ವ ಹೊಂದಿ ಕುಡಿವ ತೀರ್ಥಸ್ಥಾನ ಪಡೆಯುವ ಜಾನಪದ ಸಾಹಿತ್ಯದಲ್ಲಿ, ಲಾವಣಿ, **ಗೀಗೀ**ಪದಗಳು ತಮ್ಮದೇ ಆದ ವಿಶಿಷ್ಟ ಸ್ಥಾನ ಪಡೆದುಕೊಂಡಿದೆ. ಪ್ರತಿ ಪ್ರದರ್ಶನದಲ್ಲೂ ಸೃಷ್ಟಿಕಾರ್ಯ ನಡೆಯುವಂತೆ, ಆಶುಕವಿತ್ವ ಈ ಕಲಾವಿದರ ಸಾಮರ್ಥ್ಯವಾಗಿದೆ. ಕಂಡದ್ದರ ಬಗೆಗೆ ಕಟ್ಟುವ ಕಲೆ ಇವರಿಗೆ ರಕ್ತಗತ

ಈ ಸಂಗ್ರಹದಲ್ಲಿ ಉತ್ತರ ಕರ್ನಾಟಕದ ಪ್ರಸಿದ್ಧ ಗೀಗೀ ಮೇಳಗಳ ಕುರಿತಂತೆ ವಿವರ ಮಾಹಿತಿ ದೊರೆಯುತ್ತದೆ.

ತೇರದಾಳ, ಇಂಗಳಗಿ, ಹಲಸಂಗಿ ಸಾವಳಗಿ, ಹುಲಕುಂದ **ಗೀಗೀ ಮೇಳಗಳು** ಇಲ್ಲಿ ಜಾನಪದೀಯವಾಗಿ ಚರ್ಚೆಗೆ ಒಳಗಾಗಿದೆ.

ಕ್ಷೇತ್ರತಜ್ಞರು ಕೃತಿಯಲಾಭ ಪಡೆದುಕೊಳ್ಳಬಹುದಾಗಿದೆ.

ಧರ್ಮದರ್ಶಿ ಹರಿಕೃಷ್ಣ ಪುನರೂರು
ಅಧ್ಯಕ್ಷರು